Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ 4ಗ | ತಾರೀಕು ೧೫-೭-೧೯೩೭ನೇ ಶುಕ್ರವಾರ | ಸಂಚಿಕೆ ೭

ಕೊಡಗು ಶಾಸನ ಸಭೆಯಲ್ಲಿ

ಚೀಫ್ ಕಮಿಷನರ ಭಾಷಣ.

'ಸಿ' ಸಂಸ್ಥಾನಗಳ ಅಕ್ಕಿನ ಮೇರೆ ರಚನೆಯಾಗಿ, ಕಳೆದ ಮಾರ್ಚಿ ತಾರೀಕು ೨೬ನೇ ತಾರೀಖಿನಲ್ಲಿ ಕೇಂದ್ರದ ಸ್ವಾಸ್ಥ್ಯ ಮಂತ್ರಿ ಶ್ರೀ ಕೆ. ಎ. ಕಾಟ್ಜೂರವರಿಂದ ಉದ್ಘಾಟಿಸಲ್ಪಟ್ಟ ಈ ಶಾಸನ ಮಂಡಳಿಯ ಪ್ರಥಮ ಸಭೆಯನ್ನು ಉದ್ದೇಶಿಸಿ ಮಾತಾಡಲು ನನಗೆ ಹರ್ಷವನ್ನಿಸುವುದು. ನಿಮ್ಮೆಲ್ಲರಿಗೂ ನಾನು ಸ್ವಾಗತ ಬಯಸುವುದಲ್ಲದೆ ನಿಮ್ಮ ಶಾಸ್ತ್ರ ಕಲಾಪಗಳಲ್ಲಿ ಜಯವಾಗಲೆಂದು ಆಶಿಸುತ್ತೇನೆ. ನಿಮಗೆ ಕೊಡಲ್ಪಟ್ಟಿರುವ ಸಂವಿಧಾನಗಳ ಹಿನ್ನೆಲೆಯನ್ನು ವಿವರಿಸುವ ಅವಶ್ಯಕತೆ ಇಲ್ಲ. ಹಿಂದೂದೇಶವನ್ನು ಸರ್ವ ಸ್ವತಂತ್ರ ಪ್ರಜಾರಾಜ್ಯವಾಗಿ ಸಾರಿ ಪರರಾಜ್ಯಘಟನೆಯನ್ನು ೧೯೫೦ನೇ ಇಸವರಿ ೧೫ನೇ ತಾರೀಖಿಗೆ ತಂದಾದರೂ ನಿಮಗೆಲ್ಲ ತಿಳಿದಿದೆ. ಇಂದು ನಮ್ಮ ಮುಂದಿರುವಂತೆ ಹಿಂದೆ ಎಂದೂ ನಮ್ಮ ದೇಶವು ಇಷ್ಟು ಒಕ್ಕಟ್ಟಾಗಿಯೂ, ಏಕೀಕೃತವಾಗಿಯೂ ಇರಲಿಲ್ಲ ಹಿಂದೂದೇಶ ಭೂಪಟವು ಪುನಃ ರೂಪಿಸಲ್ಪಟ್ಟು ಖಂಡಕ್ಕೆ ಹೆಚ್ಚಿದ ಸಂಸ್ಥಾನಗಳು ಹಿಂದೂದೇಶದ ಇತರ ಭಾಗಗಳೊಂದಿಗೆ ಸಮಾವೇಶಗೊಳಿಸಲ್ಪಟ್ಟವು ನಮ್ಮ ಮಹಾ ಮಂಡಾಳಿಗಳ ಈ ಮಹಾ ಕಾರ್ಯದ ಅಂಗವಾಗಿ 'ಸಿ' ಭಾಗದ ಸಂಸ್ಥಾನಗಳ ಕಾಯಿದೆಯು ಜಾರಿಗೆ ಬಂದು ಹಿಂದೂದೇಶದ ರಾಜ್ಯ ಘಟನೆಯಲ್ಲಿ ತಮ್ಮ ಅಡಳಿತ ಪಡೆಸಲು ಜವಾಬ್ದಾರಿ ಶಾಸನ ಸಭೆ, ಮಂತ್ರಿಮಂಡಲಗಳಿಂದ ಕೂಡಿದ ಜವಾಬ್ದಾರಿ ಸರಕಾರವು ಕೊಡಗನ್ನೊಳಗೊಂಡ ಆರು ಸಂಸ್ಥಾನಗಳಿಗೆ ಕೊಡಲ್ಪಟ್ಟಿತು. ನನಗೆ ಸ್ವ ಅಡಳಿತ ಹಕ್ಕನ್ನು ತಂದು ಈ ಚರಿತ್ರಾರ್ಹ ಕಾರ್ಯವಿಧಿಯನ್ನು ರೂಪಿಸಲು ಕಾರಣರಾದ ದೇಶದ ಮಂದಾಳುಗಳಿಗೂ ನಮ್ಮ ಪ್ರತಿನಿಧಿಯಾಗಿದ್ದ ಶ್ರೀ ಸಿ. ಎಂ. ಪೂಣಚ್ಚನವರಿಗೂ ನಮ್ಮ ವಂದನೆಗಳನ್ನರ್ಪಿಸುವಲ್ಲಿ ನೀವೂ ಸಹಭಾಗಿಗಳಾಗಬೇಕೆಂದು ಇಚ್ಛಿಸುತ್ತೇನೆ.

ಈ ಶಾಸನ ಸಭೆಯೊಳಗೆ ಬರುವ ಇತರ ಸಂಸ್ಥಾನಗಳಿಗಿಂತಾ ಭಿನ್ನವಾಗಿ ಕೊಡಗು ೧೯೩೪ರಿಂದಲೇ ಶಾಸನ ಸಭೆಯನ್ನು ಪಡೆದಿತ್ತು. ದೇಶದ ಅಡಳಿತದಲ್ಲಿ ಪರಿಜ್ಞಾನಪೂರ್ಣವಾಗಿ ಭಾಗಿಯಾಗಲು ಈ ಶಾಸನ ಸಭೆಯು ಆನು ಮೂಡುತ್ತಿಲ್ಲವೆಂದು ಇಲ್ಲಿಯ ಜನತೆಯು ಶಾಸನ ಸಭಾ ಸದಸ್ಯರು ವ್ಯಕ್ತ ಮಾಡುತ್ತಿದ್ದ ನಿರಾಶಾಭಾವವು ನನಗೆ ತಿಳಿದಿತ್ತು. ಆದು ಕೇವಲ ಶಿಫಾರಸ್ಸಿನ ಕೌನ್ಸಿಲಾಗಿ ಜನರ ಅಸೆ ಭರವಸೆಗಳನ್ನು ಈಡೇರಿಸುವಂತಿರಲಿಲ್ಲ ಆದರೂ ಈ ಅಡಳಿತವು ಆ ಕೌನ್ಸಿಲು ಶಿಫಾರಸ್ಸು ಮಾಡಿದ ನಿರ್ಣಯಗಳಿಗೆ ಯೋಗ್ಯ ಬೆಲೆ ಕೊಡುತ್ತಿತ್ತೆಂದು ಭರವಸೆ ಕೊಡಬಲ್ಲೆ ಏಕೆಂದರೆ ಆದು ಜನತೆಯು ಅಭಿಪ್ರಾಯವಾಗಿತ್ತು. ಸರಕಾರಕ್ಕೆ ಜನ ಪ್ರತಿನಿಧಿಗಳ ಎಲ್ಲಾ ಠರಾವುಗಳನ್ನು ಜಾರಿಯಲ್ಲಿ ತರುವದು ಪ್ರಾಮುಖ್ಯವಾಗಿ ಆರ್ಥಿಕ ಕಾರಣದಿಂದ ಅಸಾಧ್ಯವಾಗುತಿದ್ದರೂ ಸಾಧ್ಯವಾದುದನ್ನೆಲ್ಲಾ ಮಾಡಲಾಗುತಿತ್ತು. ಸರಕಾರವು ಅಡಳಿತದಲ್ಲಿ ಸಾಧ್ಯವಾದಷ್ಟು ಸಾರ್ವಜನಿಕ ಸಹಕಾರ ಪಡೆಯಲು ಬೆಂಬಲ ಪಡೆಯಲು ಯತ್ನಿಸುತಿತ್ತು. ಆ ಕೌನ್ಸಿಲು ನಮಗೆ ಶಾಸನ ಸಭಾ ಆಸನ ಭವನವನ್ನು ಒದಗಿಸಿ ಕೊಟ್ಟ ಈ ಪರಿಪೂರ್ಣ ಜವಾಬ್ದಾರಿಯ ಕೌನ್ಸಿಲಿನ ಕಾರ್ಯ ಕಲಾಪಗಳನ್ನು ನಡೆಸಲು ಮತ್ತು ಸರಕಾರದ ಜವಾಬ್ದಾರಿ ಹೊತ್ತಿರುವ ಮಂತ್ರಿಗಳಿಗೆ ಪ್ರಗತಿಶೀಲ ಅಡಳಿತದ ಬಗ್ಗೆ ಸಲಹೆ ಕೊಡಲು ಸಹಕಾರಿಯಾಯಿತೆಂಬುದರಲ್ಲಿ ಸಂಶಯವಿಲ್ಲ

ನಿಮ್ಮ ಚೀಫ್ ಕಮಿಷನರಾಗಿ ನಾನು ಬಂದನಂತರ ಶಾಸನ ಸಭೆಯಲ್ಲಿ ಎರಡು ವರ್ಷಗಳ ವರೆಗೆ ಅಧ್ಯಕ್ಷತೆ ವಹಿಸುವ ಅದೃಷ್ಟವು ನನಗೊದಗಿತ್ತು. ಆ ಶಾಸನ ಸಭೆಯ ಗೌರವ ಮತ್ತು ಶಿಸ್ತನ್ನು ಸೆಂಬರುಗಳು ಯೋಗ್ಯರೀತಿ ಪಾಲಿಸಿ ಠರಾವುಗಳಮತ್ತು ಚರ್ಚೆಸೂಚನೆಗಳ ಮೂಲಕ ಸರಕಾರಕ್ಕೆ ಅಮೂಲ್ಯ ಸಲಹೆ ಇತ್ತುದ್ದಾರೆ. ಆ ಸೆಂಬರುಗಳಲ್ಲಿ ಕೆಲವರು ಇಂದೂ ಸದಸ್ಯರಾಗಿ ಆರಿಸಲ್ಪಟ್ಟಿರುವುದರಿಂದ ಅವರೆಲ್ಲರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನರ್ಪಿಸುತ್ತೇನೆ.

ಸ್ವಾತಂತ್ರ್ಯಕ್ಕಾಗಿ ಕಠಿಣ ಯುದ್ಧವನ್ನು ಮಾಡಿ ಜಯಶೀಲವಾದ ಕಾಂಗ್ರೆಸು ಈ ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದದ್ದು ಯೋಗ್ಯವಾಗಿದೆ. ಈ ಸಂಸ್ಥಾನದ ಸುಮಾರು ೯೫ ಸಾವಿರ ಮತದಾರರಲ್ಲಿ ೬೪ ಸಾವಿರ ಜನರು ಚುನಾವಣೆಯಲ್ಲಿ ಭಾಗವಹಿಸಿದರು. ಪ್ರೌಢ ಮತದಾನ ಪದ್ಧತಿಯು ಈ ಪ್ರಥಮ ಪರೀಕ್ಷೆಯಲ್ಲಿ ಪ್ರಚಲಿತವಾಗಿರುವ ಅವಿದ್ಯೆಯು ಈ ಕಾಲದಲ್ಲೂ ಮೂರನೆಯ ಎರಡುಶತಪಟ್ಟು ಜನರು ಚುನಾವಣೆಯಲ್ಲಿ ಭಾಗವಹಿಸಿದ್ದು ನಿಜವಾಗಿಯೂ ಪ್ರಶಂಸನಾರ್ಹವಾಗಿದೆ. ನೀವು ಪ್ರತ್ಯೇಕ ಪ್ರತ್ಯೇಕ ಪ್ರಶ್ನೆಗಳ ಮೇಲೆ ಚುನಾವಣೆಯಲ್ಲಿ ಹೊಡೆದಾಡಿರಬಹುದು ಅವರಿ ಒಂದು ಪಕ್ಷವು ಬಹುಮತವನ್ನು ಪಡೆದು ಬಂದನಂತರ ನನ್ನ ಮಟ್ಟಿಗೆ ಹೇಳುವದಾದರೆ ಕೊಡಗಿನ ಭವಿಷ್ಯ ನಿರ್ಣಾಯದ ಪ್ರಶ್ನೆಯು ಪಕ್ಷಕ್ಕಿಲ್ಲದ್ದರಿಂದ ತಮ್ಮ ತಮ್ಮ ತಬೇಧನನ್ನು ಮರೆಯಬೇಕಾಗಿದೆ ಆದ್ದರಿಂದ ಸದಸ್ಯರು ಬಹುಮತ ಪಕ್ಷದೊಡನೆ ಸಹಕರಿಸಿ ದೇಶದ ಹಿತದೃಷ್ಟಿಯಿಂದ ಮುಂದಿದರೆ ಉತ್ತಮವಾಗುವದು ಈ ದೃಷ್ಟಿಯಿಂದ ಎಲ್ಲರೂ ತಮ್ಮ ಮತಬೇಧಗಳನ್ನು ಮರೆತು ಸಹಕರಿಸಿ ನಿಮ್ಮ ಮೇಲೆ ಜನತೆಯು ಇರಿಸಿರುವ ವಿಶ್ವಾಸಕ್ಕನುಗುಣವಾಗಿ ದೇಶದ ಹಿತಕ್ಕಾಗಿ ದುಡಿಯುವಿರೆಂದು ಆಶಿಸಲು ಮೂಡುತ್ತೇನೆ.

ಈ ಸಭೆಯು ಈ ವರ್ಷದ ಬಜೆಟ್ಟನ್ನು ಪರಿಶೀಲಿಸಿ ಒಪ್ಪುವ ದೃಷ್ಟಿಯಿಂದ ಕರೆಸಲ್ಪಟ್ಟಿದೆ. ಬಜೆಟ್ಟನ್ನು ಮುಂದಿಡುವ ವೇಳೆಯಲ್ಲಿ ಹಣಕಾಸಿನ ಸ್ಥಿತಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಮೂಡುತ್ತೇನೆ.

ಲೇಂಡ್ ರೆವಿನ್ಯೂ—ನೀತಿಯಲ್ಲಿ ಯಾವ ಬದಲಾವಣೆ ಇಲ್ಲ. ರಿಸೆಟ್ಲ್‌ಮೆಂಟ್ ಕೆಲಸ ನಡೆಯುತ್ತಿದೆ. ಡೇರಾಡೂನಿಗೆ ತರಬೇತಿಗೆ ಕಳಿಸಿದ ಇಬ್ಬರು ಆಧಿಕಾರಿಗಳು ಬಂದನಂತರ ಭೂಮಿ ಇಲ್ಲದವರಿಗೆ ಭೂಮಿ ಕೊಡಲು ದೊರೆಯುವ ಜಾಗಗಳ ಸರ್ವೆ ಸೈಕೋರ್ಸಲಾಗುವುದು. ಅಲ್ಲದೆ ಒಂದು ದಕ್ಷವಾದ ಸರ್ವೆ ಶಾಲೆಯನ್ನೂ ನಡೆಸಲಾಗುವುದು. ಕೊಡಗಿನಲ್ಲಿ ಜಮೀನ್ದಾರಿ ಪದ್ಧತಿಯು ಒಂದು ಸಮಸ್ಯೆಯಾಗಿ ಉಳಿದಿಲ್ಲ.

ಎಕ್ಸೈಸ್—ನೀತಿಯು ನಿಮಗೆ ತಿಳಿದಿದೆ ಕಾಂಗ್ರೆಸ್ ಪಾನನಿರೋಧ ತತ್ವಕ್ಕೆ ಬದ್ಧವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಕೊಡಗಿನಲ್ಲಿ ಕೂಪನ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಅಕ್ರಮ ಸಾರಾಯಿ ತಯಾರಿಸುವದು ಹೆಚ್ಚಾಗಿ ಇದಕ್ಕಾಗಿ ತಲಾಖೆಯನ್ನು ಬಿಡಿಸಬೇಕಾಯಿತು. ಈ ಅಕ್ರಮ ಸಾರಾಯಿ ತಯಾರಿಸುವದನ್ನೂ, ಇದರಿಂದ ಜನರ ಆರೋಗ್ಯಕ್ಕೆ ಆಗುವ ಹಾನಿಯನ್ನೂ ನಿರ್ಬಂಧಿಸಲು ಪ್ರತಿ ಕೂಪನ್‌ದಾರನಿಗೆ ತಿಂಗಳಿಗೆ ಎರಡು ಬಾಟ್ಲಿ ಸಾರಾಯಿ ಕೊಡಬೇಕೆಂದೂ ಬಾಟ್ಲಿಗೆ ರೂ. ೫ ವಿಸಬೇಕೆಂದೂ ಎಕ್ಸೈಸ್ ಕಮಿಟಿ ತೀರ್ಮಾನಿಸಿದೆ.

ಫಾರೆಸ್ಟ್—ಆದಾಯವು ನಮ್ಮ ದೇಶದ ಬೆನ್ನೆಲುಬು. ನಮ್ಮ ಫಾರೆಸ್ಟ್ ಕನ್ಸರ್ವೇಟರು ಒಂದು ೧೦೦ ವರ್ಷಗಳ ಯೋಜನೆಯನ್ನು ತಯಾರಿಸಿ ಪ್ರತಿವರ್ಷ ಸುಮಾರು ೫೯ ಲಕ್ಷ ರೂಪಾಯಿ ಆದಾಯ ಬರುವ ಏರ್ಪಾಡು ಮಾಡಿರುವರು. ಏಲಕ್ಕಿ ಮೇಲೆ, ಎನರ್ ಸ್ಟೋನ್ ಫಾರೆಸ್ಟ್ ಈ ಬಾಬುಗಳಿಂದ ಸುಮಾರು ೩೪ ಲಕ್ಷ ಆದಾಯ ಬರಲಿದೆ. ಪ್ರತಿ ವರ್ಷ ಒಂದು ಜಡರ ನೈಲಿನಲ್ಲಿ ಮಾಡಿದ ತೇಗ ಬೆಳೆಸುವ ಏರ್ಪಾಡುಮಾಡಲಾಗಿದೆ. ಫಾರೆಸ್ಟ್ ಇಲಾಖೆಯು ಕಳೆದ ವರ್ಷ ೩೪ ಎನೆಗಳನ್ನು ಹಿಡಿದು ಸುಮಾರು ೧,೬೮,೦೦೦ ರೂಪಾಯಿಗಳಿಸಿತು. ಈಗ ಇಲಾಖೆಯ ಕೆಲಸಕ್ಕಾಗಿ ಟ್ರ್ಯಾಕ್ಟರು ಉಪ

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:—THE ORIENTAL ENTERPRISES, BANGALORE I

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯೂದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮೂ ಕಂಪೆನಿಗಳಲ್ಲಿ ಜುಬಿಲಿಯೂ ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಓಡನೆ ಬರೆಯಿರಿ.

ದಿ ಓರಿಯೆಂಟೆಲ್ ಎಂಟರ್‌ಪ್ರೈಸಸ್,
41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

16

'ದೇಶದ ಹಿತಕ್ಕಾಗಿ ಒಗ್ಗಟ್ಟಿನಿಂದ ದುಡಿಯಿರಿ'

(೧ನೇ ಪುಟದಿಂದ ಮುಂದುವರಿದದ್ದು)

ಯೋಗಿಸಲಾಗುತ್ತಿದೆ.

ವಿದ್ಯಾ–ಇಲಾಖೆಯ ಬಗ್ಗೆ ಹೆಚ್ಚಿನ ಗಮನ ಕೊಡಲಾಗಿದೆ. ೩ಪ್ರಾಥಮಿಕ ಶಾಲೆ, ೨ಪ್ರೌಢ ಶಾಲೆ ಮತ್ತು ೨ ಹೈಸ್ಕೂಲು ಗಳು ಕೆಲಸ ಪ್ರಾರಂಭಿಸಿವೆ. ಪೊನ್ನಂಪೇಟೆ ಹೈಸ್ಕೂಲು ಪೂರ್ಣಗೊಂಡಿದೆ. ಮಡಿಕೇರಿಯಲ್ಲಿ ಕಾಲೇಜು ಕಟ್ಟಡ ಕೆಲಸ ಮುಂದುವರಿಯುತ್ತಿದೆ. ಬರುವ ಜನವರಿಯಲ್ಲಿ ಕೆಲಸ ಮುಗಿಯಬಹುದೆಂದು ಅಂದಾಜು ಮಾಡಲಾಗಿದೆ ಈಗಿರುವ ದ್ವಿತೀಯ ಸ್ಥಾಯಿಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾಡಲಾಗುವುದು ಪ್ರೌಢ ವಿದ್ಯಾಯೋಜನೆಗೆ ಹೆಚ್ಚಿನ ಗಮನ ಕೊಡಲಾಗುವುದು. ಕೂಡಿಗೆಯಲ್ಲಿ ವ್ಯವಸಾಯ ಶಾಲೆಯೊಂದನ್ನು ತೆರೆಯುವ ಏರ್ಪಾಡಾಗಿದೆ. ಇದಕ್ಕಾಗಿ ೧೦೦ ಏಕ್ರೆ ಜಾಗ ಪ್ರತ್ಯೇಕಿಸಿಡಲಾಗಿದೆ. ಇದರ ಕಟ್ಟಡ ಕೆಲಸವು ಈ ವರ್ಷ ನಡೆಯುವುದು. ಶನಿವಾರಸಂತೆಯಲ್ಲಿ ನೇಯ್ಗೆ ಶಾಲೆ, ಮತ್ತು ಸೋಮವಾರಪೇಟೆಯಲ್ಲಿ ಎಸ್. ಸಿ ಸಿ. ದಳ ಈ ವರ್ಷ ಏರ್ಪಡಿಸಲಾಗುವುದು.

ವ್ಯವಸಾಯ–ಇಲಾಖೆಯು ದೇಶದ ಜನತೆಯು ಬೆನ್ನೆಲುಬಾಗಿದೆ. ಬೆಳೆಯುವವನಿಗೆ ಹೆಚ್ಚಿನ ಸಹಾಯಕ್ಕಾಗಿ ಅನೇಕ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಕಂಪೋಸ್ಟಿಂಗ್, ಹಸುರುಗೊಬ್ಬರ, ಉತ್ತಮ ಬೀಜ, ವ್ಯವಸಾಯ ಹತ್ಯಾರು, ಹಂಪುಗಳು ಮೊದಲಾದ ರೀತಿಯ ಸಹಾಯದ ಏರ್ಪಾಡಾಗಿದೆ. ವ್ಯವಸಾಯಗಾರರ ಹಿತಕ್ಕಾಗಿ 'ವ್ಯವಸಾಯ ವಿಸ್ತರಣಾ ಯೋಜನೆ'ಯೊಂದನ್ನು ಏರ್ಪಡಿಸಲಾಗಿದೆ. ಇದಕ್ಕೆ ಕೇಂದ್ರ ಸರಕಾರವು ಹಣ ಸಹಾಯನೀಡಲಿದೆ. ಇದು ಕಮ್ಯೂನಿಟಿ ಪ್ರಾಜೆಕ್ಟಿನ (ಸಾಮೂಹಿಕ ಯೋಜನೆ) ಜೊತೆಯಲ್ಲಿ ನಡೆಯುವುದು. ಪೊನ್ನಂಪೇಟೆ ಮತ್ತು ಕೂಡಿಗೆಯಲ್ಲಿ ಸರಕಾರಿ ಫಾರ್ಮುಗಳನ್ನು ತೆರೆಯಲಾಗಿದೆ. ವಿವಿಧರೀತಿಯ ಬತ್ತ ಮೊದಲಾದುವುಗಳ ಪರಿಶೀಲನೆ ನಡೆದಿದೆ. ಕೆತ್ತಳೆಯ ಬಗ್ಗೆ ಹೆಚ್ಚಿನ ಎಚ್ಚರಿಕೆ ತೆಗೆಯಲಾಗಿದೆ. ಇದಕ್ಕಾಗಿ ರಿಸರ್ಚ್ ಅಧಿಕಾರಿಯೊಬ್ಬರ ನೇಮಕವಾಗಿದೆ. 'ಫೆನ್ಸಿಂಗ್' ಕಾಯಿಲೆಗೆ ಇನ್ನೂ ಶಾಶ್ವತವಾದ ಪರಿಹಾರ ಕಂಡುಹಿಡಿಯಲ್ಪಟ್ಟಿರುವದಿಲ್ಲ. ಈ ಇಲಾಖೆಗೆ ಒಂದು ಟ್ರಾಕ್ಟರನ್ನು ಕೊಂಡು ಕೊಳ್ಳಲಾಗಿದೆ. ಇದು ಬಾಡಿಗೆಗೆ ರೈತರಿಗೆ ದೊರೆಯುವದು. ಕ್ರಾಪ್ ಕಾಂಪಿಟೆ ಷನಿನಲ್ಲಿ ಕೊಡಗು ಅಖಿಲ ಭಾರತ ಲೆಕಾರ್ಡನ್ನು ಮುರಿದಿದೆ. ಈ ವರ್ಷವೂ ಅದರ ಏರ್ಪಾಡಿದೆ.

ನೀರಾವರಿ–ಯೋಜನೆಗೆ ೨೬ ಲಕ್ಷ ಇಡಲಾಗಿದೆ. ೧೯೭೧ ರಲ್ಲಿ ೧೫೨ ಕೆರೆಗಳನ್ನೂ ೪೬ ಕಟ್ಟೆಗಳನ್ನೂ ಕಟ್ಟಲಾಗಿತ್ತು. ಮೂರು ಸಾವಿರ ಏಕ್ರೆ ಭೂಮಿಗೆ ಹೆಚ್ಚಿಗೆ ನೀರು ಪಡಿಸಲಾಯಿತು. ಬಾಡಿಗೆಗೆ ಪಂಪುಗಳ ಏರ್ಪಾಡು ಮಾಡಲಾಗಿದೆ.

ಪಿಂಚಣಿಗಾರಿಕೆ–ಇವನ್ನು ವೃದ್ಧಿಗೊಳಿಸಲು ಮುಂದಾಗಿ ಸರಕಾರದ ಅಧಿಕಾರಿಯೊಬ್ಬರ ಸಹಾಯಪಡೆಯಲಾಗಿದೆ. ಇದನ್ನು ಇನ್ನೂ ವಿಸ್ತೃತವಾಗಿ ನಡೆಸಲಾಗುವದು.

ಆಡಳಿತ ಜೀನು ಸಾಕುವ ಕೈಗಾರಿಕೆಯೂ ಸರಕಾರದಿಂದ ನಡೆಯುತ್ತಿದೆ.

ವೆಟರ್‌ನರಿ–ಇಲಾಖೆಗೆ ಹೆಚ್ಚಿನ ಗಮನ ಕೊಡಲಾಗಿದೆ. ಎರಡು ಗ್ರಾಮೋತರ ಆಸ್ಪತ್ರೆಗಳನ್ನು ತೆರೆಯಲಾಗಿದೆ ಇಲಾಖೆಯು ೯೦ ಸಿಂಥಿ, ೬೫ ಗೀರ್, ೧೫ ಶೆವಾಲ್, ಒಂದು ಹಳ್ಳಿಕಾರ್ ಗೂಳಿಗಳನ್ನೂ ಒಂದು ಮುರ್ರಾ ಕೋಣವನ್ನು ಇಟ್ಟುಕೊಂಡಿದೆ ವಿರಕಿನ ವಿಲಿಟರಿ ಫಾರಮಿನಿಂದ ೧೩ ಶೆವಾಲ್ ಗೂಳಿಗಳನ್ನು ಕೊಂಡುಕೊಂಡು ಬೇರೆ ಬೇರೆಡೆ ಹಂಚಲಾಗಿದೆ ಕೂಡಿಗೆಯಲ್ಲಿ ದನಗಳಿಗೆ ಕೃತಕಗರ್ಭದಾನದ ಕೇಂದ್ರವನ್ನು ತೆರೆಯಲಾಗಿದೆ. 'ಕೀ' ಗ್ರಾಮ ಯೋಜನೆಯ ಪ್ರಕಾರ ಕಾಜೂರುನಲ್ಲಿ ಒಂದು ಕೇಂದ್ರ ತೆರೆಯಲಾಗಿದೆ ಕೋಳಿ ಸಾಕುವ ವಿಚಾರ ಹೆಚ್ಚಿನ ಗಮನವೀಯಲಾಗಿದೆ. ಇದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಮಡಿಕೇರಿಯಲ್ಲಿರುವ ಡೈರಿ ಫಾರಂನ್ನು ಕೂಡಿಗೆಗೆ ವರ್ಗಾಯಿಸುವ ಏರ್ಪಾಡಾಗಿದೆ. ಕೊಡ್ಲಿಪೇಟೆ, ಬಾಳೆಲೆ, ಮದೆನಾಡುಗಳಲ್ಲಿ ಹೊಸ ಆಸ್ಪತ್ರೆಗಳನ್ನೂ ಆಸುಪತ್ರೆಕೊಪ್ಪ ಗ್ರಾಮದಲ್ಲಿ ಒಂದು ಮೊದಲ ಕೇಂದ್ರವನ್ನೂ ತೆರೆಯಲಾಗುವದು.

ಸಾರ್ವಜನಿಕ ಆರೋಗ್ಯ–ಇಲಾಖೆಯು ಪಾರಾಣೆ, ಕಡಂಗಗಳಲ್ಲಿ ಎರಡು ಪಾಶ್ಚಾಸ್ಪತ್ರೆಗಳನ್ನು ತೆರೆದಿದೆ. ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಎಲ್ಲಾ ಕಣ್ಣಾನೋವುಗಳಿಗೆ ಔಷಧಿ ಮಾಡುವ ಏರ್ಪಾಡು ಮಾಡಲಾಗಿದೆ. ನಾಪೋಕ್ಲಿನಲ್ಲಿ ಒಂದು ಹೊಗೆ ವಾರ್ಡು, ಸುಂಟಿಕೊಪ್ಪದಲ್ಲಿ ಒಂದು ಇನ್‌ಸ್ಪೇಶಂಟ್ ವಾರ್ಡು ತೆರೆಯಲಾಗಿದೆ. ಕ್ಷಯರೋಗ ಚಿಕಿತ್ಸೆಗೆ ಪ್ರತ್ಯೇಕ ಡಾಕ್ಟರೊಬ್ಬರ ನೇಮಕವಾಗಿದೆ. ಕ್ಷಯರೋಗಿಗಳಿಗಾಗಿ ಪ್ರತ್ಯೇಕ ವಾರ್ಡು ಕಟ್ಟಲಾಗಿದೆ. 'ಬಿ ಸಿ ಜಿ' ವ್ಯಾಕ್ಸಿನೇಶನಿನ ಏರ್ಪಾಡು ಮಾಡಲಾಗುವದು ಮಲೇರಿಯಾ ನಿವಾರಣಾ ಇಲಾಖೆಯು ಉತ್ತಮ ಕೆಲಸಮಾಡಿದೆ. ಹಿಂದೆ ಸಾವಿರಕ್ಕೆ ೨೫೭ ರಂತೆ ಇದ್ದ ಮರಣ ಸಂಖ್ಯೆಯು ಇಂದು ೧೦೦೦ ಕ್ಕೆ ೧೯ ಕ್ಕೆ ಇಳಿದಿದೆ. ಸಾರ್ವಜನಿಕ ಆರೋಗ್ಯದ ಅಭಿವೃದ್ಧಿಯಾಗಿದೆ. ದೇಶದ ಜನತೆಯ ಸಂಖ್ಯೆಯು ಶೇಕ್ಷಣ್ಣ೭೦ ರಷ್ಟು ಹೆಚ್ಚಾಗಿದೆ.

ಸಹಕಾರ–ಇಲಾಖೆಯಲ್ಲಿ ಮೂರು ಗ್ರಾಮಾಂತರ ಬ್ಯಾಂಕುಗಳನ್ನು ತೆರೆಯಲಾಗಿದೆ. ನಾಪೋಕ್ಲಿನಲ್ಲಿ ಶಿಶು ವಿಹಾರವೊಂದನ್ನು ತೆರೆಯಲಾಗಿದೆ. ಒಟ್ಟು ಕೊಡಗಿನಲ್ಲಿ ೪ ಶಿಶುವಿಹಾರಗಳಿದ್ದು ೩೦೦ ಮಕ್ಕಳು ವಿದ್ಯೆ ಕಲಿಯುತ್ತಿವಾರೆ. ೧೯೭೧ ರಲ್ಲಿ ೧೧೪ ಹೊಸ ಸಂಘಗಳ ಸ್ಥಾಪನೆಯಾಗಿದೆ. ಕೊಡಗಿನಲ್ಲಿ ೩೭೧ ಸಂಘಗಳಿವೆ.

೨ ಗ್ರಾಮಾಂತರ ರಸ್ತೆಗಳ–ಅಭಿವೃದ್ಧಿಗಾಗಿ ೧೧,೪೭,೭೦೦ ರೂಪಾಯಿ ಇಡಲಾಗಿದೆ. ಈ ವರ್ಷ ಪೊನ್ನಂಪೇಟೆಯಲ್ಲಿ ಒಂದು ಟೆಲಿಗ್ರಾಫ್ ಆಫೀಸು, ಮಡಿಕೇರಿಯಲ್ಲಿ ಪಬ್ಲಿಕ್ ಟೆಲಿಫೋನ್ ಆಫೀಸು, ತೆರೆಯಲಾಗುವದು.

ಸಿವಿಲ್ ವರ್ಕ್ಸ್–ಮಡಿಕೇರಿ–ಸಿದ್ದಾಪುರ, ಮಡಿಕೇರಿ–ಫ್ರೇಜರ್‌ಪೇಟೆ ರಸ್ತೆಗೆ ತಾರು ಹಾಕಲಾಗಿದೆ. ಮಲೇರಿಯಾ ಕಟ್ಟಡಕಟ್ಟಲಾಗಿದೆ. ನಾಪೋಕ್ಲು, ಪೊನ್ನಂಪೇಟೆ ಸೋಮವಾರಪೇಟೆ ಕಟ್ಟಡಗಳ ಪೂರ್ತಿಯಾಗಿವೆ. ಈ ವರ್ಷ ಸರಕಾರವು ಮಡಿಕೇರಿ–ಮಂಗಳೂರು, ಮಡಿಕೇರಿ–ಮೂನಾಡು (೪ ಮೈಲಿ ಗಳು) ಸಿದ್ದಾಪುರ–ವೀರಾಜಪೇಟೆ, ಫ್ರೇಜರ್‌ಪೇಟೆ–ಕೂಡಿಗೆ, ಸಿದ್ದಾಪುರ–ಫ್ರೇಜರ್‌ಪೇಟೆ ರಸ್ತೆಗಳಿಗೆ ತಾರುಹಾಕುವದು. ಮಡಿಕೇರಿ ರಸ್ತೆಯನ್ನು ಅಗಲಮಾಡಲಾಗುವದು. ಪೊಲೀಸ್ ತರಬೇತು ಶಾಲಾ ಕಟ್ಟಡ ಕಟ್ಟಲಾಗುವದು. ಕೂಡಿಗೆಯಲ್ಲಿ ಮೂಲ ಶಿಕ್ಷಣ ಕಟ್ಟಡ ಕಟ್ಟಲಾಗುವದು. ಸೋಮವಾರಪೇಟೆ ಆಸ್ಪತ್ರೆಗೆ ಹೊಸ ವಾರ್ಡ, ಮಡಿಕೇರಿಯಲ್ಲಿ ಮಕ್ಕಳ ಆಸ್ಪತ್ರೆ, ಕಾಲೇಜು ಬೋರ್ಡಿಂಗ್‌ಮನೆ, ಕಲಿಕೆ ರಸ್ತೆ, ಚೇತರಿಸೇತವೆ, ಮಡಿಕೇರಿ ಕೊಡ್ಲಿಪೇಟೆ ರಸ್ತೆಗೆ ತಾರು, ಹುದಿಕೇರಿ, ಭಾಗಮಂಡಲ ಟೂನು ಭಾಗಗಳ ರಸ್ತೆಗೆ ತಾರು ಹಾಕುವ ಮೊದಲಾದ ಕೆಲಸ ಕೈಕೊಳ್ಳಲಾಗುವದು.

ಎಕ್ಸ್‌ಸರ್ವಿಸ್‌ಮೆನ್‌ಗಳ–ಪುನರ್ನಿವೇಶನದ ಬಗ್ಗೆ ಸರಕಾರ ತೊಂದರೆ ತೆಗೆದುಕೊಂಡಿದೆ. ಖಾಲಿ ಮಾಜಿ ಸಿಪಾಯಿಗಳಿಗೆ ಜಾಗ ಕೊಡಲಾಗಿದೆ. ಇವರಿಗಾಗಿ ಒಂದು ಸಹಕಾರ ಸಾಮೂಹಿಕ ವ್ಯವಸಾಯ ಕೇಂದ್ರ ತೆರೆಯುವ ಆಲೋಚನೆ ಇದೆ.

ಈಗಿರುವ ೯ ನಾಡುಗಳನ್ನು ೧೧ ಆಗಿ ವಿಂಗಡಿಸಲಾಗುವುದು ಸಂಟಿಕೊಪ್ಪ ಮತ್ತು ಭಾಗಮಂಡಲಗಳು ಪ್ರತ್ಯೇಕ ನಾಡುಗಳಾಗುವವು.

ಕೊಡಗು ಆಹಾರದ ಮಟ್ಟಿಗೆ ಉಳುವರಿಪ್ರಾಂತವಾಗಿದೆ. ೧೯೭೭ ರಲ್ಲಿ ೭೨೦೦ ಟನ್ ಅಕ್ಕಿಯನ್ನು ಕೊಟ್ಟಿದ್ದೆವು. ಈ ವರ್ಷ ಈ ವರೆಗೆ ೭೫೦೦ ಟನ್ ಕೊಡಲಾಗಿದೆ. ಇನ್ನು ಸ್ವಲ್ಪ ಕೊಡುವ ಭರವಸೆ ಇದೆ. ಲೇಬರ್ ಪ್ರಶ್ನೆಯನ್ನೂ ಸರಕಾರ ಮರೆತಿಲ್ಲ. ಇದಕ್ಕಾಗಿ ಬೇರೆ ಸಿಬ್ಬಂದಿ ನೇಮಿಸುವ ಆಲೋಚನೆ ಇದೆ. ಅದೇರೀತಿ ಹಿಂದುಳಿದ ಹಂಗಡದವರ ಹಿತದ ಬಗ್ಗೂ ಸರಕಾರ ಹೆಚ್ಚಿನ ನಿಗವಹಿಸಿದೆ ಸರಕಾರವು ಅವರಿಗೆ ಭೂಮಿ, ಮನೆ ಜಾಗ ಕೊಡುವದಲ್ಲದೆ ವಿದ್ಯಾರ್ಥಿಗಳಿಗೆ ವೇತನ, ಬಟ್ಟೆ, ಪುಸ್ತಕ, ಮಧ್ಯಾಹ್ನ ಊಟ ಮೊದಲಾದುವನ್ನು ಕೊಡುತ್ತಿದೆ. ಫಾರೆಸ್ಟ್ ಇಲಾಖೆಯು ಇವರಿಗಾಗಿ ಒಂದು ಥರ್ಡ್‌ಸ್ಪತ್ರೆ ಮತ್ತು ಶಾಲೆಯನ್ನು ಕಲ್ಲುಗದ್ದಲ್ಲಿ ನಡೆಸುತ್ತಿದೆ.

ಸ್ಥಳೀಯ ಸಂಸ್ಥೆ–ಜಿಲ್ಲಾ ಬೋರ್ಡಿನ ಅವಧಿ ವರಗಿದ ಕಾರಣ ಅಡ್ಮಿನಿಸ್ಟ್ರೇಷನರು ಅಧಿಕಾರ ವಹಿಸಿಕೊಂಡಿರುವರು. ಜಿಲ್ಲಾ ಬೋರ್ಡಿನ ತನ್ನ ವಿಂಗಡಣೆಯಲ್ಲಿ ಬೋರ್ಡಿನ ಸರ್ವಜವಾಬ್ದಾರಿಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ನಿರ್ಣಯಿಸಿದೆ. ಈ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಪೊನ್ನಂಪೇಟೆ, ಗೋಣಿಕೊಪ್ಪಗಳಲ್ಲಿ ನೋಟಿಫೈಡ್ ಏರಿಯಾ ಏರ್ಪಾಡು ಮಾಡಲಾಗಿದೆ. ಹೆಚ್ಚಿನ ಗ್ರಾಮ ಪಂಚಾಯಿತಿಗಳ ಏರ್ಪಾಡು ಮಾಡಲಾಗುವುದು.

ಹಾರಂಗಿ ಮತ್ತು ಲಕ್ಷ್ಮಣತೀರ್ಥ ನೀರಾವರಿ ಯೋಜನೆಗಳ ಮತ್ತು ಬರಪೊಳೆ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಬಗ್ಗೆ ಸರಕಾರ ಕ್ಷಾತುರತೆಯಿಂದಿದೆ ನೀರಾವರಿ ಯೋಜನೆಗಳ ಬಗ್ಗೆ ಕ್ವೀಕ್ ಇಲಾಖೆಯವರು ಪರಿಶೀಲನೆ ನಡೆಸುತ್ತಿದ್ದಾರೆ. ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಬಗ್ಗೆ ಮದ್ರಾಸ್ ಸರಕಾರದೊಡನೆ ವ್ಯವಹಾರ ಪತ್ರ ನಡೆಸಿದ್ದು ಅವರ ಉತ್ತರವನ್ನು ಕಾಯಲಾಗುತ್ತಿದೆ. ಮೈಸೂರು ನಮಗೆ ವಿದ್ಯುಕ್ತಿ ಸರಬರಾಯಿ ಮಾಡಲು ಒಪ್ಪಿದ್ದು ಇದನ್ನು ಇಂಡಿಯಾ ಸರಕಾರದ ಒಪ್ಪಿಗೆಗೆ ಬಿಡಲಾಗಿದೆ. ಈ ಒಪ್ಪಿಗೆ ದೊರೆತೊಡನೆ ಕೆಲಸ ಪ್ರಾರಂಭವಾಗುವುದು.

ಸಾಮೂಹಿಕ ವಿಕಾಸ ಯೋಜನೆ—ಇಂಡಿಯಾ ಸರಕಾರದವರು ಕೊಡಗಿನಲ್ಲಿ ಈ ಯೋಜನೆಯನ್ನು ಕೈಕೊಳ್ಳುವಿರ್ಧಾರ ಮಾಡಿ ಪ್ರಥಮ ಉತ್ತರ ಕೊಡಗಿನಲ್ಲಿ ನೂರು ಗ್ರಾಮಗಳನ್ನು ಆರಿಸಲಾಗಿದೆ. ಇದಕ್ಕೆ ಸುಮಾರು ೨೨ ಲಕ್ಷ ವೆಚ್ಚವಾಗುವುದು. ಗ್ರಾಮಾಂತರ ಜನ ಜೀವನದ ಪ್ರತೀ ಅಂಗದ ಅಭಿವೃದ್ಧಿಯೂ ಈ ಯೋಜನೆಯಲ್ಲಿ ಸ್ವಯಂವೇಶವಾಗುವುದು.

ಈ ಸಭೆಯಲ್ಲಿ ಕೇವಲ ಮಂತ್ರಿಗಳ ಸ್ವೀಕರಣಗಳ ಮತ್ತು ಸದಸ್ಯರ ವೇತನದ ಮಸೂದೆಯನ್ನು ಮಾತ್ರ ಈ ಬಾರಿ ಆಲೋಚಿಸಲಾಗುವುದು.

ಸರಕಾರವು ಯಾವ ಕೆಲಸ ಮಾಡಿದೆ ಮುಂದೆ ಏನು ಮಾಡಲಿದೆಯೆಂಬ ಒಂದು ಸೂಕ್ಷ್ಮ ಪರಿಚಯವನ್ನು ಇಲ್ಲಿ ಮಾಡಿರುವೆನು. ಸರಕಾರದ ಮುಂದೆ ಪ್ರಾಮುಖ್ಯವಾಗಿ ಆರ್ಥಿಕ ತೊಂದರೆ ಇದೆ. ಅದಕ್ಕೆ ಸಹನೆ ಸರಕಾರಗಳನ್ನು ತೋರಿಸಿದರೆ ಈ ಸರಕಾರದ ಜನಪ್ರಿಯ ಮಂತ್ರಿಗಳು ತಮ್ಮ ಕೈಲಾಗುವ ಪ್ರಯತ್ನ ಮಾಡಿ ಜನತೆಯ ಹಿತಕ್ಕೂ, ದೇಶದ ಪ್ರಗತಿಗೂ ಮನ ಮುಟ್ಟಿ 'ದುಡಿಯುವರೆಂಬ ಭರವಸೆಯನ್ನು ಕೊಡುವೆನು.

'ಜೈ ಹಿಂದ್'

ಶ್ರೀ ಕೆ. ಸಿ. ಪೀತಾಂಬರರವರು,
" ಕೊಡಗು " ಏಜೆಂಟರು,
ಕೊಡ್ಲಿಪೇಟೆ.

ಕ್ರಾಂತಿಕಾರಿ ಗಾಂಧೀವಾದಿ.

(ಕರ್ಮವೀರದಿಂದ)

ಗಾಂಧೀಜಿಯಿಂದ ಅಕಕ್ಷೀಶರಾಗಿ ದೇಶಕಾರ್ಯಕ್ಕಾಗಿ ಜೀವನವನ್ನು ಧಾರೆ ಎರೆದು ಸುಖಲೋಲುಪತೆಯ ಭವಿಷ್ಯಕ್ಕೆ ಶರಣು ಹೊಡೆದ ಸಾವಿರಗಟ್ಟಲೆ ಜನರಲ್ಲಿ ಶ್ರೀ. ಜೆ. ಸಿ. ಕುಮಾರಪ್ಪನವರೊಬ್ಬರು. ಆದರೆ ರಾಷ್ಟ್ರಪಿತನ ಹಡಗವನ್ನು ಹತ್ತಿದವರಲ್ಲನೇಕರು ಇಂದು ರಾಜಕೀಯ ಅಧಿಕಾರದ ಕಡೆಯನ್ನು ನೋಡಿದ್ದಾರೆ. ಹಲವರು ಆ ಪ್ರಯಾಣದ ಸಂಕಟಗಳಿಗಂಜಿ ಕಡಿಮೆ ತ್ಯಾಗದ ಸಾಮಾನ್ಯ ಜೀವನದ ದಾರಿ ಹಿಡಿದಿದ್ದಾರೆ. ಆದರೆ ಕುಮಾರಪ್ಪನವರು ಇಪ್ಪತ್ತಮೂರು ವರ್ಷಗಳ ಹಿಂದೆ ಕೈಕೊಂಡ ನಿಷ್ಕಾಮ ಕರ್ಮಪಥವನ್ನು ಇನ್ನೂ ತುಳಿಯುತ್ತಿದ್ದಾರೆ. ಅಷ್ಟೂ ಗಾಂಧೀಜಿ ಹಿರಿದೆಂದು ಬಗೆದಿದ್ದ ರಚನಾತ್ಮಕ ಕಾರ್ಯಕ್ರಮದಲ್ಲಿ ಬಾಳನ್ನು ಸಮರ್ಪಿಸಿಕೊಂಡ ಐದಾರು ಜನ ಮೇಲ್ಮರದ ಪುಣ್ಯಾತ್ಮರಲ್ಲಿ ಅವರೊಬ್ಬರು. ಕಳೆದ ಜನವರಿಯಲ್ಲಿ ಅವರಿಗೆ ಅರುವತ್ತು ತುಂಬಿದಾಗ ಅವರಿಗೆ ಪ್ರಶಸ್ತಿರೂಪವಾಗಿ ಒಂದು ಬೃಹದ್ಗ್ರಂಥವನ್ನು ಸರ್ವಸೇವಾ ಸಂಘದ ಕಾರ್ಯಕರ್ತರು ಅರ್ಪಿಸಿದರು. ಅಖಂಡ-ಅಮೂಲ್ಯ ದೇಶಸೇವೆಯಿಂದ ಶ್ರೀ. ಕುಮಾರಪ್ಪನವರು ಎಲ್ಲ ತರದಿಂದ ಈ ಗೌರವಕ್ಕೆ ಸರ್ವಾತ್ಪರರಾಗಿದ್ದಾರೆಂದು ನಿಶ್ಶಂಕೆಯಿಂದ ಹೇಳಬಹುದು. ಅದೇ ಪ್ರಕಾರ ಗ್ರಂಥವಾದರೂ ಶ್ರೀ. ಕುಮಾರಪ್ಪನವರ ಜೀವನ ಕಾರ್ಯಗಳನ್ನಷ್ಟೇ ಅಲ್ಲ, ಗಾಂಧೀಜಿ ಕಲ್ಪಿಸಿದ ಭಾರತೀಯ ಆದರ್ಶಜೀವನಕ್ಕೆ ಕೈಗನ್ನಡಿಯಂತಿರುವ ಹಲ ಲೇಖನಗಳಿಂದ ಅತ್ಯಂತ ಸಂಗ್ರಾಹ್ಯವಾಗಿದೆ.

ತುಂಜಾವೂರಿನಲ್ಲಿ ಒಂದು ಅನುಕೂಲ ಸ್ಥ ಸ್ಪೃಶ್ಯ ಕುಟುಂಬದಲ್ಲಿ ಶ್ರೀ. ಜಾಸೆಫ್ ಕರ್ನೇಲಿಯಸ್ ಕುಮಾರಪ್ಪನವರು ಒಂಭತ್ತನೆಯ ಮಗುವಾಗಿ ಹುಟ್ಟಿದರು. ಅವರಿಗೆ ಇಂಗ್ಲೆಂಡ್ ಅಮೇರಿಕಗಳಲ್ಲಿ ಉಚ್ಚ ಶಿಕ್ಷಣ ದೊರೆಯಿತು. ಮುಂಬಯಿಯ ಪ್ರಸಿದ್ಧ ವಾಣಿಜ್ಯ ವಿದ್ಯಾಲಯವಾದ ಸಾವರ್ಸ್ ಕಾಲೇಜ ಆಫ್ ಕಾಮರ್ಸದಲ್ಲಿ ಅಧ್ಯಾಪಕರೂ ಪಾಲುಗಾರರೂ ಆಗಿ ಅವರು ತಮ್ಮ ಬಾಳುವೆಯನ್ನು ಪ್ರಾರಂಭಿಸಿದರು. ಅವರೇ ಹೇಳಿದಂತೆ, ನಾಲ್ಕಂಕೆಗಳ ವರಮಾನ ದೊರೆಯಲಾರಂಭಿಸಿದ ಮೇಲೆ ವಿವಾಹವಾಗಿ ಸುಖ ಸಂತೋಷದ ಜೀವನ ಪ್ರಾರಂಭಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ನಾಲ್ಕಂಕೆಯ ವರಮಾನ ಅವರಿಗೆ ಹೆಚ್ಚು ದೂರದಲ್ಲಿಯೂ ಇರಲಿಲ್ಲ. ಆದರೆ ಅವರು ಇಂದಿಗೂ ಬ್ರಹ್ಮಚಾರಿಗಳಾಗಿ ಉಳಿದಿದ್ದಾರೆ. ಗಾಂಧೀಜಿ ಅವರನ್ನು ಆಕರ್ಷಿಸಿದರು. ಐಷಾರಾಮದ ಭವಿಷ್ಯಕ್ಕೆ ಶರಣು ಹೊಡೆದು ಅವರು ದರಿದ್ರನಾರಾಯಣನ ಸೇವೆಗೆ ಟೊಂಕ ಕಟ್ಟಿದರು. ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಯಾಗಿ ಮತ್ತು ಮಂತ್ರಿಯಾಗಿ ಅದರ ಅಧ್ಯಕ್ಷರಾಗಿ ಅದನ್ನು ಕಟ್ಟಿ ಬೆಳೆಸಿದ ಶ್ರೇಯಸ್ಸು ಅವರಿಗೇ ಸೇರಿದ್ದು. ಈಗ ಅವರು ಸಂಘದಿಂದ ನಿವೃತ್ತರಾಗಿ ವರ್ಧಾದಿಂದ ಕೆಲ ಮೈಲು ದೂರದಲ್ಲಿ ಸೇಲ್ಡೊ ಎಂಬ ಹಳ್ಳಿಯಲ್ಲಿ ಆದರ್ಶಗ್ರಾಮವನ್ನು ಕಟ್ಟುವ ಹಟದಿಂದ ಮುಡಿಯತೊಡಗಿದ್ದಾರೆ. ಪರಮಾತ್ಮನ ಅನುಗ್ರಹ ಆಯುರಾರೋಗ್ಯವನ್ನು ದಯಪಾಲಿಸಿದರೆ ಇವರು ಈ ಸಹಜದಲ್ಲಿ ಸಫಲರಾಗುವರೆಂದು ನಿರೀಕ್ಷಿಸಲು ಆತಂಕವಿಲ್ಲ.

* * *

ಗಾಂಧೀಜಿಯ ಶಿಷ್ಯರೆಲ್ಲರ ಹಾಗೆಯೇ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರಮುಖರಾಗಿದ್ದವರಿಬ್ಬರು: ಶ್ರೀ ಜೆ ಬಿ ಕೃಪಲಾನಿ ಮತ್ತು ಶ್ರೀ. ಜೆ. ಸಿ. ಕುಮಾರಪ್ಪ. ಶ್ರೀ ಕುಮಾರಪ್ಪನವರಿಗೆ ಯಾವ ರಾಜಕೀಯ ಮಹತ್ವಾಕಾಂಕ್ಷೆಯೂ ಇಲ್ಲದ್ದರಿಂದ ಅವರ ಟೀಕೆಗಳು ಇನ್ನಷ್ಟು ಉಗ್ರವಾಗಿರುತ್ತವೆ. ಅವರ ಈ ನಿರ್ಭಯ ಮತ್ತು ನಿರ್ದಯ ಟೀಕೆಗಳೇ ಅವರನ್ನು ರಾಜಕೀಯಕ್ಕೆ ಸಂಬಂಧವಿಲ್ಲದ ರಚನಾತ್ಮಕ ಕಾರ್ಯಕರ್ತರಾಗಿದ್ದರೂ ಹಲಬಾರಿ ಬ್ರಿಟಿಷ್ ಸೆರೆಮನೆಗಳಿಗೆ ಒಯ್ದವು. ಜಾಗರೂಕತೆ, ಮಧ್ಯಮಮಾರ್ಗ, ನ್ಯಾಯೆ ಇತ್ಯಾದಿ ಶಬ್ದಗಳು ಅವರ ಕೋಶದಲ್ಲಿ ಇಲ್ಲವೇ ಇಲ್ಲ ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಕೆಲವು ದಿನ ಅವರು ಗಾಂಧೀಜಿಯ 'ಯಂಗ್ ಇಂಡಿಯಾ' ಸಂಪಾದಕರಾಗಿದ್ದರು. ಕೆಲ ಯಂರೋಫಿಯನ್ ಸಾರ್ಜಂಟರು ನಡೆಸಿದ ಅತ್ಯಾಚಾರವನ್ನು ಅತ್ಯುಗ್ರ ಶಬ್ದಗಳಲ್ಲಿ ಖಂಡಿಸಿ ಅವರು ಲೇಖನ ಬರೆದರು. ಲೇಖನ ಇಷ್ಟು ಉಗ್ರವಿಚಾರದಿಂದು ಸಹ ಕಾರ್ಯಕರ್ತರು ಹೇಳಿದರೆ ಮೃದುಶಬ್ದಗಳನ್ನು ಪ್ರಯೋಗಿಸುವುದು ಸತ್ಯಕ್ಕೆ ದ್ರೋಹವೆಂದು ಉತ್ತರ ಬಂತು. ಅಹಮದಾಬಾದ ಜೈಲ್ಲು ವೇಜಿಸ್ಟ್ರೇಟರಿಂದ ಇದಕ್ಕಾಗಿ ಎಚ್ಚರಿಕೆ ಬಂದಾಗ, ನಿಮ್ಮ ಸರಕಾರ ಜನತೆಯ ಹಕ್ಕನ್ನು ಅಪಹರಿಸಿದ ಸರಕಾರ ನಿಮ್ಮ ಸರಕಾರದ ಮೇಲೆ ಜನತೆಯ ಅಪ್ರೀತಿಯನ್ನು ನಾನ ಉಂಟುಮಾಡಿದ್ದೇನೆಯೆನ್ನವಿಲ್ಲ, ನಿಮ್ಮ ಮೇಲೆ ಜನತೆಗೆ ಪ್ರೀತಿಯಿದ್ದರೆ ತಾನೆ?-ಎಂದು ಹೇಳಿಕಳಿಸಿಬಿಟ್ಟರು. ಎರಡು ವರ್ಷ ಶಿಕ್ಷೆಯಾಯಿತು. ಗಾಂಧೀಜಿಗೆ ಕುಮಾರಪ್ಪನವರ ಈ ಬಿರುಸು ಸುತನವನ್ನು ಕಂಡಿತು ಯೂರೋ ದೂರಿಕೊಂಡಾಗ ಗಾಂಧೀಜಿ ಅಂದದ್ದು, 'ಕುಮಾರಪ್ಪ ವದ್ಯಾಸಿನವರು ವಂದ್ಯಾಸು ಮೇಣಸಿನ ಕಾಯಿಯು ರಾಜ್ಯ. ವೇಣಸಿನ ಕಾಯಿಯಿಂದ ಖಾರವನ್ನು ತೆಗೆದು ಹಾಕುವದು ಅಸಾಧ್ಯ.' ೧೯೩೮ ರಲ್ಲಿ ನುತೆ ಎರಡು ವರ್ಷ ಅವರು ಸೆರೆಮನೆ ಕಂಡರು. ೧೯೩೮ ರಲ್ಲಿ 'ಗ್ರಾಮೋದ್ಯೋಗ ಪತ್ರಿಕೆ'ಯಲ್ಲಿ ಬರೆದ ಏನನ್ನು ಕೇಳಿದರೆ ಕಲ್ಲು ಕೊಟ್ಟರು' ಎಂಬ ಲೇಖನಕ್ಕಾಗಿ ಪುನಃ ಸೆರೆಮನೆಗೆ ಹೋದರು. ಈ ಸಲ ಅವರು ಭಾರತವನ್ನು ಸುಲಿಗೆ ಮಾಡಿ ಪಲಾಯನ ಮಾಡುವ ಎತ್ತಿಗಡೆಯನ್ನು ಸರಕಾರ ಮಾಡುತ್ತಿದೆಯೆಂದು ಬರೆದಿದ್ದರು. ಜಪಾನಿನ ಕೈಯಲ್ಲಿ ಹೊಡೆತ ತಿಂದು ಸೋತ ಬ್ರಿಟಿಷರು ಇದನ್ನು ಸಹಿಸದಿದ್ದುದೇನು ಆಶ್ಚರ್ಯ?

ಕ್ರೈಸ್ತ ಧರ್ಮ ಮತ್ತು ಗಾಂಧೀ ಚಳವಳಿಯ ಸಂಬಂಧದಲ್ಲಿ ಅವರಿಗೂ ಭಾರತದ ಶ್ರೇಷ್ಠ ಕ್ರೈಸ್ತ ಧರ್ಮಗುರು ಮೆಟ್ರೊಪಾಲಿಟನ್ನರಿಗೂ ಒಮ್ಮೆ ದೊಡ್ಡ ವಿವಾದ ಎದ್ದಿತು. ಆಗ ಅವರ ಅಕ್ಕ ಮೆಟ್ರೊಪಾಲಿಟನ್ನರಂಥ ಗುರುಗಳ ಮೇಲೆ ಇಷ್ಟು ಉಗ್ರಭಾಷೆಯನ್ನು ಪಯೋಗಿಸಬಾರದೆಂದು ಸೂಚಿಸಿದರು. ಕುಮಾರಪ್ಪನವರ ಉತ್ತರ ನಿಷ್ಠುರವಾಗಿತ್ತು: 'ನನಗೆ ಒಂದು ವಸ್ತು ಕಪ್ಪಾಗಿ ಕಂಡರೆ ಅದನ್ನು ಕಪ್ಪೆಂದು ಕರೆಯಬೇಕೇ ಹೊರತು ಕಂದೆಂದಲ್ಲ!'

* * *

ಬ್ರಿಟಿಷರ ವಿರುದ್ಧವೇ ಅವರು ಇಂಥ ತೀಕ್ಷ್ಣ ವಾಕ್ಪ್ರಹಾರ ಮಾಡುತ್ತಿದ್ದರೆಂದಲ್ಲ ಸ್ವಾತಂತ್ರ್ಯ ಸಿಕ್ಕ ನಂತರ ನಮ್ಮ ಸರಕಾರಗಳು ಗಾಂಧೀ ತತ್ವಗಳನ್ನೂ ಭಾರತದ ಬಡ ಜನತೆಯನ್ನೂ ಕೈಬಿಟ್ಟು ದ್ರೋಹಮಾಡಿವೆಯೆಂದು ಅವರು ನಿರ್ದಯವಾಗಿಯೇ ಆರೋಪಿಸುತ್ತಾರೆ. ದಿಲ್ಲಿಯಲ್ಲಿ ಮಂತ್ರಿಗಳ ವೈಭವ ಜೀವನವನ್ನು ಅವರು, ಬರಹೊಟ್ಟೆಯ ಹರಕು ಬಟ್ಟೆಯ ಬಿಕ್ಕೆ ಬೇಡುವವನನ್ನು ಅಲಂಗಿ ಗುಂಡಿಗೆ ಹೂ ತಗಲಿಸಿಕೊಂಡಂತೆ, ಎಂದು ಒಣ್ಣಿಸಿದರು. 'ಮಂತ್ರಿಗಳು ಸಂತೋಷಕೂಟಗಳನ್ನು ಕೊಡುವುದರಲ್ಲಿ ಒಬ್ಬರಿಗೊಬ್ಬರು ಮೇಲಾಟ ನಡೆಸಿದ್ದಾರೆ ಆದರೆ ಬಡ ಬೋರೆಗೌಡನಿಗೆ ದೊರೆತ ಪ್ರಯೋಜನವನ್ನು ಎಣಿಸಿದರೆ ಮೊದಲಿಗಿಂತ ಕೀಳಾಗಿದೆ. ಇದು ಧೂರ್ತನ ಕಾಲದ ರಶಿಯದ ಅವಸ್ಥೆಯನ್ನು ನೆನಪಿಗೆ ತರುತ್ತದೆ. ಒಂದೆಡೆ ರಾಜವೈಭವ ಇನ್ನೊಂದೆಡೆ ದಟ್ಟದಾರಿದ್ರ್ಯ. ಕ್ರಾಂತಿಗೆ ಇದೇ ಸಾಮಗ್ರಿ....ನಮ್ಮ ಮಂತ್ರಿಮಂಡಲಗಳು ಇನ್ನಾದರೂ ಎಚ್ಚೆತ್ತು ಅನರ್ಥವನ್ನು ತಪ್ಪಿಸುವರೋ ಅಥವಾ ನಾವು ಹಿಂಸಾತ್ಮಕ ಕ್ರಾಂತಿಯ ಕಡೆ ಧುಮಿಕುತ್ತಿದ್ದೇವೆಯೋ?'

ಭಾರತದ ಬಂಡವಾಳಗಾರರ ಮೇಲೆ ಅವರಿಟ್ಟ ಬಹಳ. ಒಮ್ಮೆ ಅವರು ಉಳಿದು ಕೂಂಡ ಮನೆಯ ಗೃಹಿಣಿ ಅವರ ಸೌಕರ್ಯಕ್ಕೆಂದು ಟಾಟಾ ಸಾಬೂನೊಂದನ್ನು ಕೊಟ್ಟಳು. ಆಗ ಅವರು ಅದನ್ನು ಅವಳಿಗೆ ಹಿರಿಗಿ ಕೊಟ್ಟು 'ನಾನೇನು ಬಡವರ ರಕ್ತದಲ್ಲಿ ವೀಯವ ದುಷ್ಟನೇನು ಹೀಗೆದಿದ್ದೀರಿ? ಮಜಬೂರದಲ್ಲಿ ಭತ್ತದ ಹೊಲಗಳನ್ನಳಿಸಿ ಈ ಸಾಬೂನಿಗೆ ಎಣ್ಣೆ ಬೇಕೆಂದು ತೆಂಗಿನ ತೋಟ ಬೆಳೆಸಲಾಗುತ್ತಿದೆ' ಎಂದರು. ಸಕ್ಕರೆ ಉದ್ಯಮಕ್ಕೆ ಕಬ್ಬು ಅಗತ್ಯವಾಗಿ ದೊರಕುವಂತೆ, ಮೈದಾರಿಯ ಹಳ್ಳಿಗಳಲ್ಲಿ ಕಬ್ಬು ಬೆಳೆವ ರೈತರು ಅಪ್ಪಣೆಯಿಲ್ಲದೆ ಬೆಲ್ಲ ಮಾಡತಕ್ಕದ್ದಲ್ಲವೆಂದು ಸರಕಾರ ವಿಧಿಸಿದ್ದನ್ನು ಉಲ್ಲೇಖಿಸಿ ಅವರು "ಇಂಥ ಕಾಯದೆ ಮಾಡುವ ದೇಶದ ನಾಗರಿಕನೆಂದು ಹೇಳಿಕೊಳ್ಳಲು ನನಗೆ ನಾಚಿಕೆಯಾಗುತ್ತದೆ. ಮೇಲೆ ನಮ್ಮದು ರಾಷ್ಟ್ರೀಯ ಸರಕಾರವಂತೆ!" ಎಂದು ಉದ್ಗರಿಸಿದ್ದು. ಇಂಥಾ ಭಯಂಕರ ಆರೋಪಗಳನ್ನು ಮಾಡುವವರ ಮೇಲೆ ಆಳುವವರು ಕೋಪಿತರಾಗದಿದ್ದಾರೇ? ಕೆಲ ಪ್ರಾಂತಿಕ ಸರಕಾರಗಳು ಈ ಉಗ್ರ ಗಾಂಧೀವಾದಿಯನ್ನು ಸೆರೆವಾಸಿಗೆ ಕಳಿಸುವ ವಿಚಾರ ಕೂಡ ಮಾಡಿದವಂತೆ. ಕೇಂದ್ರ ಸರಕಾರದ ಒಬ್ಬ ಮಂತ್ರಿಕ ಮೂರಪ್ಪನವರನ್ನು ಎಷ್ಟೋಕಾಲ ಹೀಗೆ ಸಾಗಲು ಬಿಡಬೇಕೆಂದು ವರ್ಧಾದಲ್ಲಿರುವ ಅವರ ಗೆಳೆಯನಿಗೆ ಕೇಳಿದನಂತೆ ಆದರೆ ಯಾರೂ ಅವರನ್ನು ಈ ವರೆಗೆ ಯಾರೂ ಮುಟ್ಟಲಿಲ್ಲ.

ವಸ್ತುಸ್ಥಿತಿಯೆಂದರೆ ಕುಮಾರಪ್ಪನವರು ಅಪ್ಪಟ ಕ್ರಾಂತಿಕಾರಿ. ಗಾಂಧಿಜಿ ಅವರನ್ನು ತಮ್ಮ ಅಹಿಂಸೆಯ ಬಲೆಯಲ್ಲಿ ಹಿಡಿಯದಿರುತ್ತಿದ್ದರೆ ಅವರು ಹಿಂಸಾತ್ಮಕ ಕ್ರಾಂತಿಕಾರರೇ ಆಗುತ್ತಿದ್ದರೇನೋ. ತಾವು ನಿಷ್ಕಲಂಕ ಶುದ್ಧ ಚಾರಿತ್ರ್ಯರಾಗಿರುವುದರಿಂದ ಅವರು ನಿರ್ಭಯವಾಗಿ ಎದುರಾಳಿಯನ್ನು ಖಂಡಿಸುತ್ತಾರೆ. ಭೀಮನಂತೆ ಅವರಿಗೂ ಅರ್ಧಮರ್ಧ ಕೆಲಸ ಹಿಡಿಸದು. ಗಾಂಧೀವಾದದ ಕಂಕಣ ತೊಟ್ಟ ಮೇಲೆ ಗಾಂಧೀ ತತ್ವವನ್ನು ಪೂರ್ಣ ಅನುಸರಿಸುವವರು ಅವರು. ಅದರಲ್ಲಿ ಹಿಂದೆ ಮುಂದೆ ನೋಡುವವರ ಮೇಲೆ ದಯೆಗೆ ಅವಕಾಶವಿಲ್ಲ. "ಕುಮಾರಪ್ಪನವರಿಗೆ ಇನ್ನಿಗ್ಲಿಸಿನ ಅರ್ಧದಷ್ಟು ಹಿಂದೀ ಬರುತ್ತಿದ್ದರೆ ಅವರು ದೇಶದಲ್ಲಿ ಎಂದೋ ಜ್ವಾಲೆಯೆಬ್ಬಿಸಿಬಿಡುತ್ತಿದ್ದರು" ಎಂದೇ ಕಾಕಾ ಕಾಲೇಲಕರರು ಹೇಳಿದ್ದು ಸುಳ್ಳಲ್ಲ.

* * *

ಶ್ರೀ ಕುಮಾರಪ್ಪನವರ ಚರಿತ್ರದ ಈ ಮುಖ ಅವರನ್ನು ಅನೇಕರಿಗೆ ಅಪ್ರಿಯರನ್ನಾಗಿ ಮಾಡಿದ್ದರೂ ಅವರ ವ್ಯಕ್ತಿತ್ವದ ಇತರ ಮುಖಗಳು ವಾತ್ಸಲ್ಯಜನಕವಾಗಿವೆ. ಭಾರತದ ಬಡ ರೈತನ ಬಗ್ಗೆ ಅನುದಿನ ಅವರು ಮರುಕ ಅವರನ್ನು ಅಹಿಂಸಾತ್ಮಕ ಸಮಾಜಕ್ಕಾಗಿ ಹಿಂಸಾತ್ಮಕ ಭಾಷೆಯನ್ನು ಪ್ರಯೋಗಿಸುವಂತೆ ಮಾಡಿದೆ. ರಕ್ತದ ಒತ್ತಡದಿಂದ ಬಳಲುತ್ತಿದ್ದರೂ ಅವರು ಬಡವರ ಹಿತಕ್ಕೆಂದು ತಾವು ಒಪ್ಪದ ಕಾರ್ಯಕ್ರಮಕ್ಕಾಗಿ ದೇಶದ ತುದಿಯಿಂದ ತುದಿಗೆ ಸಂದಿಗೊಂದಿಗಳಿಗೆ ಓಡಾಡುತ್ತಾರೆ. ಗ್ರಾಮೋದ್ಯೋಗದ ಕಾರ್ಯದಲ್ಲಿ ನೆರವು ಬೇಡುವವರಿಗೆಲ್ಲಾ ಅದನ್ನು ನೀಡುತ್ತಾರೆ. ಗಾಂಧೀವಾದವನ್ನು ಶಾಸ್ತ್ರೀಯ ತಳಹದಿಯ ಮೇಲೆ ನಿಲ್ಲಿಸಲು ಅವರೇ ಮುಖ್ಯ ಕಾರಣರು. ಅವರು ಸಾಂಪ್ರದಾಯಿಕ ಪಾಶ್ಚಾತ್ಯ ಅರ್ಥಶಾಸ್ತ್ರದಲ್ಲಿ ಪಾರಂಗತರು. ಆದ್ದರಿಂದಲೇ ಅವರು ಆ ಅರ್ಥಶಾಸ್ತ್ರದ ಹುಳುಕುಗಳನ್ನೆಲ್ಲಾ ಬಯಲಿಗೆಳೆದು ಯುದ್ಧಕ್ಕೆ ಅದೇ ಕಾರಣವೆಂದು ತೋರಿಸಿ ಕೊಟ್ಟದ್ದಾರೆ. ಅವರು ಬರೆದ ಅನೇಕ ಪುಸ್ತಕಗಳಲ್ಲಿ ಗಾಂಧೀಜಿ ಹೇಳಿದ ಆರ್ಥಿಕ ಪದ್ಧತಿಯೊಂದೆ ಸಮತೆಯನ್ನು ಮತ್ತು ಯುದ್ಧನಿವಾರಣೆಯ ಉಪಾಯವೆಂದು ಸಿದ್ಧಪಡಿಸಿದ್ದಾರೆ. ಗ್ರಾಮಗಳ ಸ್ಥಿತಿ, ಗ್ರಾಮೋದ್ಯೋಗಗಳು, ಗ್ರಾಮ ಸುಧಾರಣೆಯ ನೀತಿ ಇವೇ ಮೊದಲಾದ ವಿಷಯಗಳಲ್ಲಿ ಅವರು ಅಭ್ಯಾಸ ಮಾಡಿ ತಯಾರಿಸಿದ ವರದಿಗಳು ಇಂದಿಗೂ ಮಾನ್ಯವಾಗಿವೆ.

* * *

ಕುಮಾರಪ್ಪನವರು ಖಾಸಗಿ ಜೀವನದಲ್ಲಿ ಅತ್ಯಂತ ಬಡವರು. ನಾಗನವಾಡಿಯಲ್ಲಿಯ ಅವರ ಗುಡಿಸಲು ಅವರ ಸರಳ ನಿರಾಡಂಬರ ಜೀವನದ ಜೀವಂತ ಕುರುಹಾಗಿದೆ. ಅಲ್ಲಿ ವನಸ್ಪತಿ ತೈಲದ ದೀಪದ ಬೆಳಕಿನಲ್ಲಿ ಅಭ್ಯಾಸ ಮಾಡುತ್ತಿರುತ್ತಾರೆ ಅವರು ಅತ್ಯಂತ ನಿಯಮದಿಂದಿರುತ್ತಾರೆ. ಅವರೆಂದೂ ತಡವಾಗಿ ಸಭೆ ಸಮ್ಮೇಳನಗಳಿಗೆ ಹೋಗುವುದಿಲ್ಲ. ಸಮಯ ತಪ್ಪಿ ಬಂದವರಿಗೆ ಭೇಟಿಯನ್ನು ಕೊಡುವುದಿಲ್ಲ. ಅವರ ಈ ಸಮಯ ಧಾರಕತೆಯ ಪೆಟ್ಟು ತಿಂದವರಲ್ಲಿ ಗಾಂಧೀಜಿಯೂ ಒಬ್ಬರು!

ಗಾಂಧೀಜಿಯ ತತ್ವಗಳು ನಿಃವಾದ ಕ್ರೈಸ್ತ ಧರ್ಮದ ತಿರುಳೆಂದು ಬಗೆಯುವ ಶ್ರೀ ಕುಮಾರಪ್ಪನವರು ದೀರ್ಘ ಕಾಲ ನಮ್ಮ ಗ್ರಾಮೋದ್ಧಾರಕ್ಕಾಗಿ ದುಡಿಯಲು ಬಾಳಲಿ.

——

ಕೊಡಗು

ತಾ. ೧೮-೭-೧೯೫೨ನೇ ಶುಕ್ರವಾರ

ಜನಸರಕಾರದ ಪ್ರಥಮ ಬಡ್ಜೆಟ್ಟು.

ಕೊಡಗಿನಲ್ಲಿ ಜನತೆಗೆ ಜವಾಬ್ದಾರವಾಗಿರುವ ಸರಕಾರವು ರಚಿತವಾಗಿ ನಾಲ್ಕು ತಿಂಗಳುಗಳಾದವು. ಈ ಜನಸರಕಾರವು ತನ್ನ ಪ್ರಥಮ ಬಡ್ಜೆಟ್ಟನ್ನು ತಯಾರಿಸಿ ಜನತೆಯ ಮುಂದಿಟ್ಟಿದೆ. ಈ ಬಡ್ಜೆಟ್ಟು ಉಳುವರ ಬಡ್ಜೆಟ್ಟಾಗಿದೆ ಉಳುವರಿಯು ಕೇವಲ ೨೮ ಸಾವಿರವಾದರೂ ಮುಖ್ಯ ಮಂತ್ರಿಯವರು ಹೇಳಿದಂತೆ ಇದು ಸಮತೂಗಲ್ಪಟ್ಟ ಬಡ್ಜೆಟ್ಟಾಗಿದೆ. ಸರ್ಕಾರಕ್ಕೆ ಈ ವರ್ಷ ರೂ. ೯೦,೧೧೦೦೦ ಆದಾಯ ಬರುವದೆಂದೂ ರೂ. ೮೯,೮೩,೦೨೦ ಖರ್ಚಾಗಬಹುದೆಂದೂ ಅಂದಾಜು ಮಾಡಲಾಗಿದೆ. ಕೊಡಗಿನ ಜನಸರಕಾರದ ಪ್ರಥಮ ಬಡ್ಜೆಟ್ಟಿನಲ್ಲಿ ವಿವಿಧ ಕೆಲಸಗಳಿಗೆ ಸಾಕಷ್ಟು ಹಣವಿಡಲಾಗಿದೆ. ಈ ಕೆಲಸಗಳೆಲ್ಲಾ ಈ ಬಡ್ಜೆಟ್ ವರ್ಷದಲ್ಲೇ ಆಗುವಂತೆ ನೋಡಬೇಕಾದುದು ಅವಶ್ಯವಿದೆ.

ಈ ವರ್ಷ ಸರಕಾರಕ್ಕೆ ಬರುವ ಆದಾಯದ ಬಾಬುಗಳಲ್ಲಿ ಫಾರೆಸ್ಟ್ ಇಲಾಖೆಯಿಂದ ರೂ. ೪೩ ಲಕ್ಷ ಬರುವದೆಂದು ಅಂದಾಜು ಮಾಡಿದೆ. ಚೀಫ್ ಕಮಿಷನರು ಈ ವಿಚಾರದಲ್ಲಿ ಭಾಷಣ ಮಾಡುತ್ತ ಫಾರೆಸ್ಟ್ ಇಲಾಖೆಯು ನೂರು ವರ್ಷಗಳ ಕಾರ್ಯಕ್ರಮವೊಂದನ್ನು ಏರ್ಪಡಿಸಿ ಪ್ರತಿ ವರ್ಷ ಸರಕಾರಕ್ಕೆ ಸುಮಾರು ೫೦ ಲಕ್ಷ ಆದಾಯ ಬರುವಂತೆ ಮಾಡಿರುವದೆಂದಿರುವರು. ಈ ಏರ್ಪಾಡು ಪ್ರಕಾರ ಪ್ರತಿ ವರ್ಷ ಸುಮಾರು ಒಂದು ಚದರ ಮೈಲು ಯಾ ೬೫೦ ಏಕರು ಸ್ಥಳದ ಟಿಂಬರು ಕಡಿದು ಮಾರಾಟ ಮಾಡಲಾಗುವದಂತೆ. ಟಿಂಬರು ಕಡಿದ ಭಾಗದಲ್ಲಿ ಬೆಲೆಯುಳ್ಳ ತೇಗ ನೆಡಲಾಗುವದಂತೆ. ಈ ರೀತಿ ಕೊಡಗಿನ ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸುವ ಏರ್ಪಾಡು ನಿಜವಾಗಿಯೂ ಭವಿಷ್ಯದ ದೃಷ್ಟಿಯಿಂದ ಹಿತವಲ್ಲವೆನ್ನಬೇಕಿದೆ. ಕೊಡಗಿನ ಸರಕಾರದಲ್ಲಿ ಹಣವಿಲ್ಲದೆ ಬೇರೆ ಅತ್ಯವಶ್ಯ ಖರ್ಚಿಗೆ ಹಣದ ತೊಂದರೆ ಇದ್ದು ಈ ರೀತಿ ಮಾಡಿದ್ದರೆ ಒಪ್ಪಬಹುದಿತ್ತು. ಆದರೆ ಇಂದು ಅಂಥಾ ಪರಿಸ್ಥಿತಿ ಇಲ್ಲ. ಟಿಂಬರಿನ ಬೆಲೆಯೂ ಕೂಡ ಆಕರ್ಷಕವಾಗಿಲ್ಲ. ಹಾಗಿರುವಾಗ ಈ ರೀತಿಯ ಫಾರೆಸ್ಟ್ ಸಂಪತ್ತಿನ ಶೋಷಣೆಯು ಯೋಗ್ಯವಲ್ಲ. ಪ್ರತಿ ವರ್ಷ ೬೫೦ ಏಕರೆ ಸ್ಥಳದಲ್ಲಿ ರೀಜನರೇಷನ್ ಮಾಡಬೇಕಾದರೆ ಕಷ್ಟದ ಕೆಲಸ. ೩ ವರ್ಷಗಳ ವರೆಗೆ ನೆಟ್ಟ ತೇಗದ ಆರೈಕೆ ನಡೆಯಬೇಕಿರುವದರಿಂದ ಮೂರನೇ ವರುಷದಲ್ಲಿ ಸುಮಾರು ೨೦೦೦ ಏಕರೆ ಸ್ಥಳದ ಮೇಲ್ವಿಚಾರ ನಡೆಸಲು ಫಾರೆಸ್ಟ್ ಕೆಲಸಗಾರರ ಸಂಖ್ಯೆ ಇಂದಿಗಿಂಥಾ ನಾಲ್ಕು ಪಟ್ಟು ಹೆಚ್ಚಾಗಬೇಕಾಗುವದು. ದೇಶದ ಹಿತದ ದೃಷ್ಟಿಯಿಂದ ಈ ಏರ್ಪಾಡು ಒಳ್ಳೆಯದೆಂದು ತೋರುವದಿಲ್ಲ. ಮೇಲಾಗಿ ಪ್ರತಿ ವರ್ಷ ೬೫೦ ಏಕರೆಗಳಂತೆ ಕೊಡಗಿನ ಫಾರೆಸ್ಟನ್ನೆಲ್ಲಾ ತೇಗದ ಕಾಡಾಗಿ ಮಾಡುವ ಅಭಿಲಾಷೆಯೂ ಸಮಂಜಸವಲ್ಲ.

ವ್ಯವಸಾಯ ಆದಾಯ ತೆರಿಗೆಯಿಂದ ಹತ್ತು ಲಕ್ಷ ಬರುವದೆಂದೂ, ಎಕ್ಸೈಸ್ ಉತ್ಪತ್ತಿಯಿಂದ ಸುಮಾರು ಹತ್ತು ಲಕ್ಷ ಬರುವದೆಂದೂ ಅಂದಾಜು ಮಾಡಲಾಗಿದೆ. ಕಳೆದ ವರ್ಷ ಪ್ರತಿಯೊಬ್ಬನಿಗೆ ತೀಗಳಿಗೆ ಒಂದು ಕುಪ್ಪಿ ಸಾರಾಯಿ ಕೊಡುತಿದ್ದು ಕುಪ್ಪಿಗೆ ರೂ. ೪ ಬೆಲೆ ಇಟ್ಟದ್ದು ಇದರಿಂದ ಸರಕಾರದ ಉತ್ಪತ್ತಿ ಹತ್ತು ಲಕ್ಷದ ವರೆಗೆ ಬಂದಿದೆ. ಈ ವರ್ಷ ಪ್ರತಿಯೊಬ್ಬನಿಗೆ ಎರಡು ಕುಪ್ಪಿ ಸಾರಾಯಿಯನ್ನು ಕೊಡುವ ವ್ಯವಸ್ಥೆ ಮಾಡಿರುವದಲ್ಲದೆ ಸಾರಾಯಿಯ ಬೆಲೆಯನ್ನು ಒಂದು ರೂಪಾಯಿ ಹೆಚ್ಚಿಗೆ ಏರಿಸಿರುವದರಿಂದ ಈ ಬಾಬಿನ ಆದಾಯವು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಸೆಟ್ಲ್‌ಮೆಂಟ್ ಆದ ಕಡೆ ಹೊಸ ದರಪಟ್ಟಿ ಕಂದಾಯವನ್ನು ಈ ವರ್ಷ ಜಾರಿಯಲ್ಲಿ ತರುವದರಿಂದ ಈ ಬಾಬಿನಲ್ಲೂ ಆದಾಯ ಹೆಚ್ಚಾಗಬಹುದು

ಖರ್ಚಿನ ಬಾಬುಗಳಲ್ಲಿ ಪ್ರಾಮುಖ್ಯವಾಗಿ ಆಡಳಿತ ಖರ್ಚಿನ ಬಗ್ಗೆ ಒಂದೆರಡು ವಿಚಾರ ಬರೆಯಬೇಕಾಗಿದೆ. ಕಳೆದ ವರ್ಷ ಸುಮಾರು ಎರಡುಮುಕ್ಕಾಲು ಲಕ್ಷವಿದ್ದ ಈ ಖರ್ಚು ಈ ವರ್ಷ ೩½ ಲಕ್ಷವಾಗಬಹುದೆಂದು ಅಂದಾಜು ಮಾಡಲಾಗಿದೆ. ಮಂತ್ರಿ ಮಂಡಳದ ಮತ್ತು ಆಡಳಿತದ ಹೊಸ ವ್ಯವಸ್ಥೆಯ ಕಾರಣ ಈ ಖರ್ಚು ಹೆಚ್ಚಾಗಿದೆಯೆಂಬುದನ್ನು ಒಪ್ಪಬಹುದಾದರೂ ಆಡಳಿತದಲ್ಲಿ ಅನಾವಶ್ಯದ ಅನೇಕ ಹುದ್ದೆಗಳಿವೆ. ಉದಾಹರಣೆಗೆ ಚೀಫ್ ಕಮಿಷನರಿಗೆ ಒಬ್ಬ ಸೆಕ್ರೆಟರಿಯ ಅವಶ್ಯಕತೆ ನಿಜವಾಗಿಯೂ ಇರಲಿಲ್ಲ. ಈ ರೀತಿಯ ಅನಾವಶ್ಯದ ಹುದ್ದೆಗಳನ್ನು ಪರಿಶೀಲಿಸಿ ತೆಗೆದು ಹಾಕಬೇಕಾದುದು ಕರ್ತವ್ಯವಿದೆ.

ಕೊಡಗಿನಲ್ಲಿ ಸಾರ್ವಜನಿಕ ಆರೋಗ್ಯ ಯಾ ವೆಟರಿನರಿ ಇಲಾಖೆಗಳಿಗೆ ಕರ್ಚಾಗುವದಕ್ಕಿಂಥಲೂ ಹೆಚ್ಚಾಗಿ ಪೊಲೀಸ್ ಇಲಾಖೆಗೆ ಖರ್ಚಾಗುತ್ತಿರುವದು ಯೋಗ್ಯವಲ್ಲ. ಈ ಇಲಾಖೆಗೆ ಮೂರಕಾಲು ಲಕ್ಷ ರೂಪಾಯಿ ವೆಚ್ಚವಾಗುವದು ಹಿತಕರವಲ್ಲ. ಈ ಇಲಾಖೆಯಲ್ಲೂ ತೀವ್ರ ಕೋತೆಯ ಏರ್ಪಾಡು ಮಾಡಬೇಕಿದೆ.

ಎಕ್ಸೈಸ್ ಇಲಾಖೆಗೆ ಸುಮಾರು ೨¾ ಲಕ್ಷ ವೆಚ್ಚವಾದರೂ ಕೂಡ ಕಪ್ಪುಸಂತೆಯ ಸಾರಾಯಿ ಮೂರಾಟ ಮತ್ತು ಮನೆ ಸಾರಾಯಿ ಕಾಸುವುದು ಕಡಿಮೆಯಾಗಿಲ್ಲ. ಈ ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡದಿದ್ದರೆ ಇದಕ್ಕಾಗಿ ಖರ್ಚಾಗುತ್ತಿರುವ ಇಷ್ಟು ದೊಡ್ಡ ಹಣಕ್ಕೆ ಸರಿಯಾದ ಪ್ರತಿಫಲ ಧ್ಲೇಶೀಯರಿಗೆ ದೊರೆಯುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಅದೇ ರೀತಿ ವ್ಯವಸಾಯ ಇಲಾಖೆಗೆ ಈ ವರೆಗೆ ಸುಮಾರು ೯ ಲಕ್ಷರೂ. ವೆಚ್ಚವಾಗುತಿದ್ದರೂ, ಈ ವರ್ಷ ಈ ಇಲಾಖೆಗಾಗಿ ೧½ ಲಕ್ಷ ಹಣವಿರಿಸಿದ್ದಾರೆ. ಈ ಇಲಾಖೆಯು ಇನ್ನೂ ದಕ್ಷತೆ ವಹಿಸದಿದ್ದರೆ ಬಡ ರೈತನಿಗೆ ಹೆಚ್ಚಿನ ಲಾಭವಾಗುವಂತಿಲ್ಲ.

ಈ ವರ್ಷದ ಬಡ್ಜೆಟ್ಟಿನಲ್ಲಿ ಕಂಡು ಬರುವ ಶುಭ ಲಕ್ಷಣಗಳೆಂದರೆ ವಿದ್ಯೆ ಇಲಾಖೆಗೆ ಇರಿಸಿದ ೧೨ ಲಕ್ಷ ರೂಪಾಯಿ, ಕೈ ಮಗ್ಗ ಕೈಗಾರಿಕೆಗೆ ರೂ. ೨೦,೦೦೦ ಗ್ರಾಮಾಂತರ ರಸ್ತೆಗಳಿಗಾಗಿ ಇರಿಸಿದ ೧¾ ಲಕ್ಷ ರೂಪಾಯಿಗಳು. ಈ ಹಣವು ಯೋಗ್ಯ ರೀತಿ ಖರ್ಚಾದರೆ ಜನತೆಗೆ ಹಲವು ಹಿತಕಾರಕ ಕೆಲಸಗಳಾಗುವದರಲ್ಲಿ ಸಂಶಯವಿಲ್ಲ. ಈ ವರ್ಷ ಹೊಸದಾಗಿ 'ಎಗ್ರಿಕಲ್ಚರಲ್ ಎಕ್ಸ್‌ಟೆನ್ಶನ್ ಸರ್ವಿಸ್' ಯೋಜನೆಯೊಂದನ್ನು ಕೈಗೊಳ್ಳುವ ಸೂಚನೆಯೂ ಇದೆ. ಇಂಡಿಯೊದ ವ್ಯವಸಾಯ ಪರಿಶೋಧನಾ ಕೌನ್ಸಿಲಿನವರು ಇದಕ್ಕೆ ಸುಮಾರು ರೂ. ೩೯,೦೦೦ ಸಹಾಯ ಮಾಡುವರೆಂದಿದೆ. ಈ ಯೋಜನೆಯ ಗುರಿಯು ಸ್ಪಷ್ಟವಾಗಿ ತಿಳಿದು ಬರದಿದ್ದರೂ ಬಡ ರೈತನ ಹಿತಕ್ಕೆಂದಿರುವ ಈ ಯೋಜನೆಯಿಂದ ಸಹಾಯವಾಗಲೆಂದು ಹಾರೈಸುತ್ತೇವೆ.

'ಕೊಡಗಿಗೆ ವಿದ್ಯುಚ್ಛಕ್ತಿಯನ್ನು ತರಲಾಗುವದು' ಮೈಸೂರಿನವರು ಒಪ್ಪಿರುವರು' ಎಂದು ಆಗಾಗ್ಗೆ ಹೇಳುತಿದ್ದರೂ ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣವಿಟ್ಟಿರುವದಿಲ್ಲ. ಸಿವಿಲ್ ವರ್ಕ್ಸ್ ಎಂದು ರೂ. ೧೭ ಲಕ್ಷವಿಟ್ಟಿದ್ದರೂ ಜೇತರಿ ಸೇತುವೆಗೆ ಹಣವಿಟ್ಟಂತೆ ತೋರುವದಿಲ್ಲ. ಹೇಗೂ ಜನಸರಕಾರವು ದೇಶದ ಮುಂದಿಟ್ಟ ಈ ಪ್ರಥಮ ಬಡ್ಜೆಟ್ಟು ಆಶಾದಾಯಕವಾಗಿದೆ. ಇದರಲ್ಲಿ ಸೂಚಿತವಾಗಿರುವ ಕೆಲಸಗಳನ್ನೆಲ್ಲಾ ಇದೇ ವರ್ಷ ಪೂರ್ತಿಗೊಳಿಸಿ ನಾಡಿನ ಅಭಿವೃದ್ಧಿಗೆ ಅಧಿಕಾರ ಹೊತ್ತವರು ದುಡಿಯಲೆಂದೂ, ಅದಕ್ಕೆ ಸಾರ್ವಜನಿಕರು ಬೆಂಬಲ ನೀಯಲೆಂದೂ ಆಶಿಸುತ್ತೇವೆ.

ವರ್ತಮಾನ.

ವಿದ್ಯಾ ಮಂತ್ರಿ ಮುಲ್ಲಪ್ಪನವರು ಶಾಸನ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವೀಯುತ್ತಾ ಕಾಲೇಜು ಕಟ್ಟಡವು ೧೯೫೩ನೇ ಏಪ್ರಿಲ್‌ನಲ್ಲಿ ಪೂರ್ತಿಯಾಗುವದೆಂದೂ, ಆ ವರ್ಷವೇ ಬಿ. ಎ., ಮತ್ತು ಬಿ. ಎಸ್ಸಿ. ತರಗತಿಗಳನ್ನು ತೆರೆಯಲಾಗುವದೆಂದೂ ಹೇಳಿದರು.

ವಿದ್ಯಾ ಮಂತ್ರಿಗಳು ಮತ್ತೊಂದು ಪ್ರಶ್ನೆಗೆ ಉತ್ತರವೀಯುತ್ತಾ ಸರಕಾರವು ಸೋಮವಾರಪೇಟೆ ಹೈಸ್ಕೂಲು ಕಟ್ಟಡಕ್ಕೆ ರೂ. ೨೬,೬೬,೮೦೦ ಗಳನ್ನೂ, ನಾಪೋಕ್ಲು ಹೈಸ್ಕೂಲು ಕಟ್ಟಡಕ್ಕೆ ರೂ. ೨,೯೬,೯೦೦ ಗಳನ್ನೂ, ಪೊನ್ನಂಪೇಟೆ ಹೈಸ್ಕೂಲಿಗೆ ರೂ. ೨,೩೨,೧೦೦ ಗಳನ್ನೂ ಮಂಜೂರ್ ಮಾಡಿತ್ತೆಂದೂ, ಸೋಮವಾರಪೇಟೆಗೆ ರೂ. ೨,೩೮,೯೦೯-೧೦ ಯೂ, ನಾಪೋಕ್ಲಿಗೆ ೨,೫೨,೨೨೨-೯-೮ಯೂ ಮತ್ತು ಪೊನ್ನಂಪೇಟೆಗೆ ೧,೮೨,೨೭೦-೫-೦ ಯೂ ಖರ್ಚಾಗಿದೆಯೆಂದೂ ಹೇಳಿದರು.

ಹಾಕತ್ತೂರು ಶಾಲೆಯ ಅಧ್ಯಾಪಕರಾದ ಶ್ರೀ ಕೆ. ಕೆ. ಪೆಮ್ಮಯ್ಯನವರು ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಮಂತ್ರಿಯಾಗಿ ಆರಿಸಲ್ಪಟ್ಟಿರುವ ಶ್ರೀ ಕೆ. ಮುಲ್ಲಪ್ಪನವರು ರಾಜಿನಾಮೆ ಕೊಟ್ಟ ಮಡಿಕೇರಿ ಮುನ್ಸಿಪಾಲಿಟಿ ಕಮಿಟಿಯ ಸ್ಥಳಕ್ಕೆ ಚುನಾವಣೆಯು ಆಗಸ್ಟ್ ತಾ. ೧೯ ರಲ್ಲಿ ನಡೆಯುವದೆಂದೂ ಉಮೇದುವಾರರಾಗಲಿಚ್ಛಿಸುವವರು ನೇಮಕ ಪತ್ರವನ್ನು ತಾ. ೨೧-೭-೫೨ರಲ್ಲಿ ಸಲ್ಲಿಸಬೇಕೆಂದೂ ತಿಳಿದು ಬಂದಿದೆ.

ಸೋಮವಾರಪೇಟೆಯಿಂದ ಬಾಣಾವರ ಮತ್ತು ಶನಿವಾರಸಂತೆಯ ಮಾರ್ಗವಾಗಿ ಹಾಸನಕ್ಕೆ ಒಂದು, ಮಡಿಕೇರಿಯಿಂದ ಕೊಡ್ಲಿಪೇಟೆ, ಸಕಲೇಶಪುರ ಮಾರ್ಗವಾಗಿ ಚಿಕ್ಕಮಗಳೂರಿಗೆ ಮತ್ತೊಂದು ಮತ್ತು ಮಾದಾಪುರದಿಂದ ಮಡಿಕೇರಿ ಮಾರ್ಗವಾಗಿ ಸಂಪಾಜೆಗೆ ಇನ್ನೊಂದು ಹೀಗೆ ಮೂರು ಬಸ್ ಲೈನುಗಳನ್ನಿಡಲು ತೀರ್ಮಾನಿಸಿರುವದರಿಂದ ತಾ. ೧೦-೪-೫೨ ರ ಒಳಗೆ ಪ್ರಾಂತೀಕ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಬರಕೊಳ್ಳಬಹುದೆಂದು ತಿಳಿಸುತ್ತಾರೆ.

ಮದ್ರಾಸು ವಿಶ್ವವಿದ್ಯಾಲಯದ ಅಧ್ಯಾಪಕರ ಮೂಲ ಶಿಕ್ಷಣ ತರಬೇತು ಪರೀಕ್ಷೆಯಲ್ಲಿ ಸೀನಿಯರ್ ಗ್ರೂಪಿನ ೧೯ ಅಧ್ಯಾಪಕರಲ್ಲಿ ೧೪ ಜನರೂ ಜೂನಿಯರ್ ಗ್ರೂಪಿನ ಳಳರಲ್ಲಿ ೩೫ ಜನರೂ ತೇರ್ಗಡೆಯಾಗಿರುವರು. ತೇರ್ಗಡೆಯಾದವರು ವೀರಾಜಪೇಟೆ ಮೂಲ ಶಿಕ್ಷಣ ಶಾಲೆಯ ಮುಖ್ಯೋಪಧ್ಯಾಯರಿಂದ ತಮ್ಮ ಸರ್ಟಿಫಿಕೇಟನ್ನು ಹೊಂದಿಕೊಳ್ಳಬಹುದಾಗಿದೆ.

ವೀರಾಜಪೇಟೆ ಹೈಸ್ಕೂಲಿನ ಚರ್ಚಾ ಸಂಘದ ಉದ್ಘಾಟನೆಯನ್ನು ತಾ. ೧೫ರಲ್ಲಿ ಶ್ರೀ ಎಸ್. ಎಸ್. ರಾಮಮೂರ್ತಿಯವರು ಜರಗಿಸಿದರು. ಮುಖ್ಯೋಪಧ್ಯಾಯರಾದ ಶ್ರೀ ಪಿ. ಎ. ಪೂವಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಓದುಗರಿಗಾಗಿ ವೀರಾಜಪೇಟೆಯ ಚರ್ಚ್ ಬೀದಿಯಲ್ಲಿ ಒಂದು ವಾಚನಾಲಯವನ್ನು ಪಾಸಗಿಯಾಗಿ ಕೆಲವರು ಸೇರಿಕೊಂಡು ತೆರೆದಿರುವರೆಂದೂ ಅಲ್ಲಿ ಸದಸ್ಯರಾಗುವವರಿಗೂ ಇತರರಿಗೂ ವಿಶ್ವದ ಅನೇಕ ಭಾಗಗಳಿಂದ ಪತ್ರಿಕೆಗಳನ್ನು ಒದಗಿಸಲಾಗುವದೆಂದೂ, ಸಾಯಂಕಾಲ ನಾಲ್ಕು ಗಂಟೆಯಿಂದ ೮ ಗಂಟೆಯ ವರೆಗೆ ಇದು ತೆರೆದಿರುವದೆಂದೂ ಅದರ ಕಾರ್ಯದರ್ಶಿ ಶ್ರೀ ಕೆ. ಸಿ. ಕರುಂಬಯ್ಯನವರು ತಿಳಿಸುತ್ತಾರೆ.

ತಾ. ೧೯-೭-೫೨ರಲ್ಲಿ ನಡೆಯಬೇಕಾಗಿದ್ದ ಸ್ಟಾಫ್ ಸಿಲೆಕ್ಷನ್ ಬೋರ್ಡ್ ವಿಚಾರಣೆಯು ಕಾರಣಾಂತರದಿಂದ ಮುಂದುವರಿಸಲ್ಪಟ್ಟಿದೆ.

ಹೆಲ್ಸಿಂಕಿಯಲ್ಲಿ ಜರಗುವ ಒಲಂಪಿಕ್ ಪಂದ್ಯಾಟಗಳಲ್ಲಿ ಹಿಂದೀಯರು ಭಾಗವಹಿಸಲಿಚ್ಛಿಸುವದಕ್ಕೆ ಸಹಾಯ ಮಾಡಲು ಕೇಂದ್ರ ಸರಕಾರದ ಶಿಕ್ಷಣ ಶಾಖೆಯು ಹಿಂದೀ ಒಲಂಪಿಕ್ ಸಂಸ್ಥೆಗೆ ೧೫೫,೦೦೦ ರೂಪಾಯಿಗಳನ್ನು ಕೊಟ್ಟಿದೆ. 'ವಿಶ್ವ ಪುರುಷ' ಸ್ಪರ್ಧೆಯಲ್ಲಿ ಭಾಗವಹಿಸಲು ಹೋಗಲಿರುವ ಶ್ರೀ ಪಂಚೇಲರಾಯರಿಗೆ ಸರಕಾರವು ಪ್ರತ್ಯೇಕವಾಗಿ ೨೦೦೦ ರೂ. ಗಳನ್ನು ಕೊಟ್ಟಿದೆ.

ಇದು ಕರ್ತವ್ಯ ಪಾಲನೆಯೆ?

ತಾ. ೧೬-೭-೫೨ರಲ್ಲಿ ಬೆಳಿಗ್ಗೆ ೯ ಗಂಟೆಗೆ ನಾಪೋಕ್ಲಿನ ಒಬ್ಬರು ಪೋಲೀಸ್ ಸ್ಟೇಷನಿಗೆ ಹೋಗಿ 'ಸರ್, ಕೊಟ್ಟ ಮುಡಿ ಹೊಳೆಯಲ್ಲಿ ಒಂದು ಹೆಣ ತೇಲುತ್ತಿದೆ' ಎಂದರಂತೆ. ಆವರೆ ಪೋಲೀಸರು ಆ ದಿನ ಸಾಯಂಕಾಲ ೫ ಗಂಟೆಯವರೆಗೆ ಹೊರಡಲಿಲ್ಲ ಐದು ಗಂಟೆಯ ಮೇಲೆ ಅವರು ಹೊರಟು ಅವೇ ಹೊಳೆಯ ಕಾರೆಕಡು ಎಂಬಲ್ಲಿ ಹೆಣವನ್ನು ಗುರ್ತಿಸಿದರು. ಆಲ್ಲಿಗೆ ತಮ್ಮ ದನ ನೋಡಿಕೊಂಡು ಬಂದ ಪಠೇಲರನ್ನು ಕರಿತು ಪೋಲೀಸರು 'ನೀವು ರಿಪೋರ್ಟು ಕೊಡಿರಿ. ರಿಪೋರ್ಟು ವಿನಾ ಹೆಣ ತೆಗೆಯಲಾಗುವದಿಲ್ಲ'ವೆಂದು ಹೇಳಿ ಸ್ಟೇಷನಿಗೆ ಕರೆದುಕೊಂಡು ಹೋಗಿ ರಿಪೋರ್ಟು ಮಾಡಿಸಿದರು. ಆಷ್ಟರಲ್ಲಿ ಸಾಯಂಕಾಲವಾದ್ದರಿಂದ ಮರು ದಿನ ಹೆಣ ಹುಡುಕಲು ಹೋದರು. ಆ ಹೆಣವು ತಾ. ೭-೭-೫೨ ರವರೆಗೆ ದೊರೆಯಲಿಲ್ಲ. ಆ ತಾರೀಖಿನಲ್ಲಿ ವೈಕಾಡಿ ಗ್ರಾಮದ ಹತ್ತಿರ ದೊರೆತಾಗ ಹೆಣದ ಮೇಲೆ ಬನೀನೊಂದೂ ಆಷ್ಟಿ ಪಂಜರವೂ ಇತ್ತು. ಆದನ್ನು ಗುರ್ತಿಸಲು ಹಚ್ಚುವದೇ ಕಠಿಣವಾಯಿತು. ಈ ಹೆಣವು ಶವ-ಭೋಗಂರಾದ ಶ್ರೀ ಅಜ್ಜಿಪಟ್ಟ ಗಣಪತಿಯವರದೆಂದು ಉಹಿಸಲಾಗಿದೆ. ತಾ. ೧೪ ನೆ ಸಾಯಂಕಾಲ ೭ ಗಂಟೆಯ ವೇಳೆ ನಾಪೋಕ್ಲಿನಿಂದ ಹೋದ ಗಣಪತಿಯವರು ಕಾಣೆಯಾಗಿ ತಾ. ೧೬ ರಲ್ಲಿ ಅವರಶವ ಕಂಡರೂ ಪೋಲೀಸರ ಅಜಾಗರೂಕತೆಯಿಂದಾಗಿ ಅವರ ಕುಟುಂಬಕ್ಕೆ ಹೆಣವನ್ನು ನೋಡುವ ಭಾಗ್ಯವಿಲ್ಲದಾಯಿತು. ಹೆಣ ಕಂಡರೂ, ಪಠೇಲರ ರಿಪೋರ್ಟಿದ್ದರೂ ತೆಂಡರಿ ತೆಗೆದುಕೊಳ್ಳಬೆ ಗಣಪತಿಯವರ ಸಂಬಂಧಿಕರು ರಿಪೋರ್ಟು ಮಾಡಿದ ಮೇಲೆ ತಾ ೭ ರಲ್ಲಿ ಪತ್ತೆಯಾಯಿತಂತೆ. ಇದೇ ನಮ್ಮ ಪೊಲೀಸ್ ಇಲಾಖೆಯ ಕರ್ತವ್ಯ ಪಾಲನೆಯೇ? 'ವಿಚಾರಿಸಿದವ'

ಓದುಗರ ಓಲೆಗಳು

ಇದಾವ ದರ್ಪ?

ಮೊನ್ನೆ ಭಾಗಮಂಡಲದ ಆಸ್ಪತ್ರೆಯನ್ನು ಸಿವಿಲ್ ಸರ್ಜನರು ಆಜಮಾಯಿಸಿಕೊಂಡು ಹೋದರು. ಅವರ ಆಜಮಾಯಿಸಿಕೆ ಕಾಲದಲ್ಲಿ ಸಾರ್ವಜನಿಕರಿಂದ ಡಾಕ್ಟರರ ಕೆಲಸವು ಏನೂ ತೃಪ್ತಿಕರವಿಲ್ಲ ವೆಂಬ ಅರ್ಜಿ ಕೊಡಲ್ಪಟ್ಟಿತ್ತಂತೆ. ಪ್ರಜಾ ಪ್ರಭುತ್ವದ ಯುಗದಲ್ಲಿ ಸಾರ್ವಜನಿಕ ಅಧಿಕಾರಿಗಳ ಕೆಲಸದ ವಿಷಯದಲ್ಲಿ ಜನರಿಗೆ ತನ್ನ ಅಭಿಪ್ರಾಯ ಸೂಚಿಸುವದಕ್ಕೆ ಸಂಪೂರ್ಣ ಅಧಿಕಾರವಿಲ್ಲವೇ? ಹೀಗಿರುವಾಗ ಸಿವಿಲ್ ಸರ್ಜನರು ತಮ್ಮ ತನಿಖೆಯನ್ನು ವಯಿಸಿ ಹೋದನಂತರ ಡಾಕ್ಟರರು ಆರ್ಜಿ ಬರೆದ ಬಡವರ ಮೇಲೆ ಬಹಳ ದರ್ಪವನ್ನು ಪ್ರದರ್ಶಿಸುತ್ತಿದ್ದರು. 'ಅರ್ಜಿ ಬರೆದವರಿಗೆಲ್ಲಾ ಬುದ್ದಿ ಕಲಿಸುತ್ತೇನೆ. ನನ್ನನ್ನು ಯಾರಿಂದಲೂ ಏನೂ ಮಾಡಲೂ ಸಾಧ್ಯವಿಲ್ಲ' ಎಂದು ಬಹಿರಂಗವಾಗಿ ದರ್ಪದಿಂದಾಡುತಿದ್ದರು. ಈ ರೀತಿ ಹಟಸಾಧನೆಯಿಂದಿರುವ ಡಾಕ್ಟರಿಂದ ಆರ್ಜಿ ಬರೆದವರು ಚಿಕಿತ್ಸೆಯನ್ನಾದರೂ ಹೇಗೆ ಪಡೆಯುವುದು? ಈ ವಿಷಯಗಳಿಗೆ ಸಿವಿಲ್ ಸರ್ಜನರು ಗಮನ ಕೊಡಬೇಕು. ಆರ್ಜಿದಾರನೊಬ್ಬ.

ನಾಲ್ಕಾಣೆ ಕಾಂಗ್ರೆಸು ಸದಸ್ಯತನ.

ಕಾಂಗ್ರೆಸು ಮಂತ್ರಿಮಂಡಲ ರಚನೆಯಾದ ನಂತರ ಕಾಂಗ್ರೆಸು ಪಕ್ಷದ ಸಂಘಟನೆಯ ಕಾರ್ಯಕ್ರಮವು ಬಹಳ ಬಿರುಸಿನಿಂದ ಸಾಗುತ್ತಿದೆ. ಎರಡು ಮೂರು ಆರ್ಗನೈಜರುಗಳನ್ನು ನೇಮಕಮಾಡಿ ದೇಶದ ಹಳ್ಳಿಗಲಕ್ಕೂ ನಾಲ್ಕಾಣೆಯ ಸದಸ್ಯರನ್ನೂ ಸೇರಿಸಿ ಕಾಂಗ್ರೆಸು ಪಕ್ಷವನ್ನು ಬೆಳೆಸುತ್ತಿದ್ದಾರೆ. ಆದರೆ ನಾಲ್ಕಾಣೆಯ ಸದಸ್ಯತನವನ್ನು ಯಾವ ಉದ್ದಿಶ್ಯಕ್ಕಾಗಿ ತೆಗೆದುಕೊಳ್ಳುತ್ತಾರೆಂದು ಮೊದಲು ಹಾಕಿದರಿ ಅದಕ್ಕೆ ಉತ್ತರ 'ಆದು ಮತ್ತೆ ಮೂಕಾಡುವ ಈಗ ನಾಲ್ಕಾಣೆ ದುಡ್ಡು ಕೊಡಿ' ಎಂದು ಹೇಳುತ್ತಾರೆ. ನಾಲ್ಕಾಣೆ ದುಡ್ಡು ವಸೂಲುಮಾಡಿ ಇದರಿಂದ ಏನು ಜನಹಿತ ಕೆಲಸ ಮಾಡುತ್ತೀರೆಂದು ಕೇಳಿದರೆ ಸಮರ್ಪಕವಾದ ಉತ್ತರವೇ ಇಲ್ಲ ಎಲ್ಲಿಯಾದರೂ ನಿಂತಿದ್ದರೆ ಇದ್ದಕ್ಕಿದ್ದಂತೆಯೇ 'ನಾಲ್ಕಾಣೆ ದುಡ್ಡು ಕೊಡಿ' ಎಂದು ಕೇಳಿಕೊಂಡು ಕಾಂಗ್ರೆಸು ಸದಸ್ಯತನದ ಚೀಟು ಹಿಡಿಸುತ್ತಾರೆ. ಜುಲೈ ತಾ. ೨೨ ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಈ ವಿಷಯವಾಗಿ ಅನೇಕ ಸಂಧರ್ಭಗಳಲ್ಲಿ ಜಗಳವಾಡುತ್ತಿದ್ದದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅಲ್ಲದೆ ಆರ್ಗನೈಜರುಗಳಲ್ಲೊಬ್ಬರು ಒಂದು ದಿವಸ ಒಬ್ಬರನ್ನು ಕರೆದು 'ನೀವು ನಿಮ್ಮ ಗ್ರಾಮದಲ್ಲಿ ಒಬ್ಬ ಆರ್ಗನೈಜರಾಗಬೇಕು; ನಿಮ್ಮ ಕೆಲಸವೆಂದರೆ ನಾಲ್ಕಾಣೆ ಸದಸ್ಯರನ್ನು ಸೇರಿಸುವುದು, ಮತ್ತು ಗ್ರಾಮದಲ್ಲಿ ಯಾರು ಯಾರು ಕಾಂಗ್ರೆಸು ಸಂಸ್ಥೆಯನ್ನು ಬಯ್ಯುತ್ತಾರೆಂದು ಹೇಳಿಕೊಡಬೇಕು' ಮತ್ತು ಕೆಲವು ಕಡೆ ಜನರು ಕಾಂಗ್ರೆಸು ಸದಸ್ಯರಾಗದಿದ್ದರೆ ಅವರ ಅರ್ಜಿ ಹವಾಲೆಗಳು ತಿರಸ್ಕರಿಸಲ್ಪಡುವುದೆಂದೂ ಹೇಳಿದ್ದಾರಂತೆ! ಕಾಂಗ್ರೆಸ್ಸು ಸಂಸ್ಥೆಯನ್ನು ಯಾವ ರೀತಿ ಅಪಹಾಸ್ಯಗೊಳಿಸುತ್ತಾರೆ. 'ಶಾಂತಿಕುಮಾರ್' 'ಕಾಯಿಲಪ್ಪ'ರಂಥವರು ಇದರ ಮೇಲೆ ಸವಾಲು ಹಾಕಲು ಬಂದರೆ ಈ ಘಟನೆಗಳು ಅವ ತಾರೀಕು, ವ್ಯಕ್ತಿಗಳು, ಸಮಯ ಸಾಕ್ಷಿ ಇವೆಲ್ಲವನ್ನು ಸರಿಯಾಗಿ ಕೊಟ್ಟು ರೂಬರೂಬು ಮಾಡಲು ಸಿದ್ದನಿದ್ದೇನೆ. ಕಾಂಗ್ರೆಸು ಇನ್ನಾದರೂ ಈ ರೀತಿ ಮಾಡದಿರಲಿ ಸರಿಯಾಗಿ ಕಾಂಗ್ರೆಸು ತತ್ವವನ್ನು ಜನತೆಯು ಮುಂದೆ ವಿವರಿಸಿ ಅವರು ಒಪ್ಪಿಕೊಂಡರೆ ಸದಸ್ಯರನ್ನಾಗಿ ತೆಗೆದುಕೊಂಡು ಮಹಾತ್ಮಾಗಾಂಧೀಜಿಯವರ ಹೆಸರನ್ನುಳಿಸುವಂತೆ ಈ ಆರ್ಗನೈಜರುಗಳು ಗಮನಕೊಡುವರೇ? ಆರ್ಗನೈಜರುಗಳ ಹೆಸರಿನಲ್ಲಿ ಗುಪ್ತಾಚಾರರಂತೆ ಕೆಲಸಮಾಡಿ ಇಲ್ಲದಸಲ್ಲದ ಅಪಪ್ರಚಾರಗಳನ್ನು ಮಾಡಬಾರದು.

'ಕ್ರಾಂತಿಕುಮಾರ್'

ಕೊಡಗು ಫಾರೆಸ್ಟ್ ಇಲಾಖೆ

ಇಂಡಿಯಾ ಸರಕಾರದ ಜೀಪ್, 'ಪ್ರಿ ಫೇಬ್ರಿಕೇಟೆಡ್' ಮನೆ, ಮೊದಲಾದ ಅನರ್ಥ ಕತೆಯಂತೆ ಕೊಡಗಿನಲ್ಲಿ 'ಫಾರೆಸ್ಟ್ ಇಲಾಖೆಯು ಅನ್ಯವಸ್ತೆ' ತಲೆ ಎತ್ತಿದೆ. ಕೊಡಗು ಸರಕಾರಕ್ಕೆ ಬಹು ಸ್ವಲ್ಪ ಸಮಯದಲ್ಲೇ ಕೆಲವು ರೂಪಾಯಿಗಳಷ್ಟು ನಷ್ಟವಾಗುವಂತಹ ತೀರ್ಮಾನಗಳಿಗೆ ಜವಾಬ್ದಾರರಾದ ಆಫೀಸರು ಇನ್ನೂ ಇರುವದು ಆಶ್ಚರ್ಯವಾಗಿದೆ. ಮಂತ್ರಿಮಂಡಿತವಾಗಿಯೂ ಸರಕಾರದ ಈ ಬಗ್ಗೆ ಗಮನವಿಡಬೇಕು.

ಈ ದೇಶದಲ್ಲಿ ಪ್ರಜಾ ಜವಾಬ್ದಾರಿ ಸರಕಾರವು ಸ್ಥಾಪಿತವಾಗಿ ಜನರ ಪ್ರತಿನಿಧಿಗಳು ಸರಕಾರವನ್ನು ನಡೆಸುವ ಭಾರವನ್ನು ಹೊತ್ತಿರುವ ಈ ಸಮಯದಲ್ಲಿ ದೇಶದ ಒಂದು ಮೂಲೆಯಲ್ಲಿ ಇಂಥಾದೊಂದು ದೊಡ್ಡ ಆರೋಪ ಎದ್ದದ್ದು ದುಃಖವೇ. ಈ ದೇಶದಲ್ಲಿಯು ಪ್ರಥಮ ಜವಾಬ್ದಾರಿ ಸರಕಾರವು ಜಯಪ್ರದವಾಗಿ ನಡೆದು ದೇಶಕ್ಕೆ ಕೀರ್ತಿಯನ್ನು ಪಡೆಯಬೇಕೆಂಬುದೇ ದೇಶದ ಜನರ ಆಶೆ.

ದೇಶದ ಜನರ ಇಂಥಾ ಆಸೆಗೆ ಅಡ್ಡಗಟ್ಟೆ ನಿಲ್ಲುವವರು ಯಾರು? ಮಂತ್ರಿಗಳು ಅನುಭವಶಾಲಿಗಳಲ್ಲ. ಅವರನ್ನು ತಾನು ಹೇಳಿದಂತೆ ನಡೆಯಬೇಕೆಂದು ಹೇಳಿಕೊಂಡು ಅಧಿಕಾರದ ದರ್ಪದಲ್ಲಿ ಅವರ ಪದವಿಯನ್ನು ದುರುಪಯೋಗಪಡಿಸುವ ಆಫೀಸರುಗಳು; ಲಂಚಕೋರರು; ನಾನೂ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಸಹಾಯ ಮಾಡಿದ್ದೇನೆಂಬ ನೆಪದ ನೆಳಲಿನಲ್ಲಿ ನಿಂತು, ಸರಕಾರಕ್ಕೆ ಅಪಕೀರ್ತಿಯನ್ನು ತರುವ ಆಫೀಸರುಗಳು ಮತ್ತು ಜನತೆಯಲ್ಲಿ ತನ್ನ ಪ್ರಯತ್ನದಿಂದ ಅವರು ಜಯಿಸಿ ಮಂತ್ರಿಗಳಾಗಿರುವರು, ಆದುದರಿಂದ ಅವರು ತನ್ನ ಕೈಹಿಡಿತದಲ್ಲಿರುವರೆಂದು, ಜನ ಸಮೂಹಾಯಕ್ಕೆ ವಿರೋಧವಾಗುವಂತಹ ತೀರ್ಪುಗಳನ್ನು ಇದೇ ಸಂದರ್ಭವೆಂದು ತನ್ನ ಸ್ವಪ್ರಯೋಜನಕ್ಕೋಸ್ಕರ ಪಡೆಯಲು ಯತ್ನಿಸುವವರು! ಎಂದರೆ, arrogant and corrupt officers, nepotism and favouritism—ಇವೇ ಪ್ರಜಾ ಸರಕಾರದ ಏಳಿಗೆಯ ಶತ್ರುಗಳು.

ಫಾರೆಸ್ಟ್ ಇಲಾಖೆಯ ಆರೋಪವು ದೇಶದ ಜನರ ಮನಸ್ಸನ್ನು ಬೇಸರಿಸಿದೆ. ಈಗ ತಾನೇ ಅಧಿಕಾರಕ್ಕೆ ಬಂದಂತಹ ಮಂತ್ರಿಗಳು ಇದನ್ನು ವಿಚಾರಿಸದೆ ಬಿಡುವರೆಂಬ ಭಯವು ಜನರಲ್ಲಿದೆ. ಕೆಲವೆ ಸಮಯಕ್ಕೆ ಹಿಂದೆ, ಒಬ್ಬ ಆಫೀಸರು ಪೂರಾ ಸರಕಾರದ ಹಿತದೃಷ್ಟಿಯಿಂದ ಕೊಟ್ಟಂತಹ ಒಂದು ಹೇಳಿಕೆಯ ಪರಿಣಾಮವಾಗಿ ಸರಕಾರಕ್ಕೆ ನಷ್ಟ ಸಂಭವಿಸಬಹುದೆಂಬ ಸಂಶಯದಿಂದ ಅವರ ಹುದ್ದೆಯಿಂದ ನಿವೃತ್ತರಾದಾಗ ಅವರ ಪ್ರಾವಿಡೆಂಟ್ ಫಂಡ್ ಮುಂತಾದ ಹಣವನ್ನು ಅವರಿಗೆ ಕೊಡಲು ಅಡ್ಡಗಟ್ಟಿದ್ದರಂತೆ! ಆದುದರಿಂದ, ಅನುಭವಶಾಲಿಗಳಾದ ಚೀಫ್ ಕಮಿಷನರು, ಈ ದೇಶದ ಪ್ರಜಾ ಜವಾಬ್ದಾರಿ ಸರಕಾರದ ಮತ್ತು ಹಿತದೃಷ್ಟಿಯಿಂದಲೂ ಮತ್ತು ಬೇರೆ ಉದ್ಯೋಗಸ್ಥರಿಗೆ ಒಂದು ಪಾಠವಾಗಿರಬೇಕೆಂದೂ ಕೂಡಲೇ ಫಾರೆಸ್ಟ್ ಆರೋಪದ ತನಿಖೆಗಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕಾಗಿ ಕೋರುವ.

-ಬೇತೀಯ.

ಕಾರಾಗೃಹದಲ್ಲಿರುವ ಗಡಿನಾಡಿನ 'ಕೆಂಪಂಗಿ' ಸಂಸ್ಥೆಯ ಧುರೀಣರಾದ ಖಾನ್ ಅಬ್ದುಲ್ ಗಫಾರಖಾನ್‌ರವರನ್ನು ಕಳೆದ ಮೂರು ತಿಂಗಳಲ್ಲಿ ಇದೀಗ ಎರಡನೆಯಬಾರಿ ಲಾಹೋರಿನ ಮೇಯೋ ಆಸ್ಪತ್ರೆಗೆ ಸೇರಿಸಲಾಗಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಅವರಿಗೊಮ್ಮೆ ಶಸ್ತ್ರ ಚಿಕಿತ್ಸೆ ನಡೆಸಲಾಗಿತ್ತು.

ಇಂಡಿಯಾ ಸರಕಾರದ ಕಾರ್ಮಿಕ ಮಂತ್ರಿಮಂಡಳದ ಸ್ತ್ರೀಪ್ರೌಢ ಔದ್ಯೋಗಿಕ ತರಬೇತು ಯೋಜನೆ.

ವೀರಾಜಪೇಟೆಯ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಈ ಕೆಳಗೆ ಸಮೂಹದಿಸಿದ ಉದ್ಯೋಗಗಳಲ್ಲಿ ತರಬೇತಾಗಲು ಜನರು ಬೇಕಾಗಿದ್ದಾರೆ.

1. ಬಿತ್ತರ ಮತ್ತು ಬಿದಿರಿನ ಕೆಲಸ.
2. ಹೊಲಿಗೆಯ ಕೆಲಸ (ಕಟ್ಟಿಂಗ್ ಮತ್ತು ಟೈಲರಿಂಗ್)
3. ಶೀಘ್ರಲಿಪಿ. (ಸ್ಟೆನೊಗ್ರಾಫಿ)—ಇದಕ್ಕೆ ಸೇರುವವರು ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು.

ಸ್ತ್ರೀಯರಿಗೂ ಪ್ರವೇಶವಿದೆ. ತರಬೇತಿನ ಕಾಲವು 12 ತಿಂಗಳು. ಶೀಘ್ರಲಿಪಿಯೊಂದನ್ನುಳಿದು ಇರತ ಉದ್ಯೋಗಗಳಿಗೆ ಸೇರಲಿಚ್ಛಿಸುವವರು ಸಾಧಾರಣ ಒಂಭತ್ತನೇ ತರಗತಿಯ ವರೆಗೆ ಓದಿರಬೇಕು. ತರಬೇತು ಉಚಿತ; ಅಲ್ಲದೆ ಶೇಕಡ 50ರಷ್ಟು ಮಂದಿಗೆ ತಿಂಗಳಿಗೆ ರೂ. 25/-ರಂತೆ ಸ್ಟೈಫಂಡನ್ನು ಕೊಡಲಾಗುವದು. ಮೇಲ್ಕಂಡ ಇನ್‌ಸ್ಟಿಟ್ಯೂಟಿನಲ್ಲೂ ಮತ್ತು ಮಡಿಕೇರಿಯ ಎಂಪ್ಲಾಯಿಮೆಂಟ್ ಆಫೀಸಿನಲ್ಲೂ ದೊರಕುವ ನಿಶ್ಚಿತ 'ಅಪ್ಲಿಕೇಶನ್ ಫಾರ್ಮು'ಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲೂ ಕಡೆಯು ತಾರೀಕು 26—7—1952. ಅರ್ಜಿಗಳನ್ನು ಇನ್ಸ್‌ಟ್ಯೂಟಿನ ಸುಪರಿಂಟೆಂಡೆಂಟರವರಿಗೆ ಸಲ್ಲಿಸತಕ್ಕದ್ದು. ಇಂಟರ್‌ವ್ಯೂಗೆ ಕರೆಸಲ್ಪಟ್ಟಿಂತವರು ತಮ್ಮ ಸ್ವಂತ ಖರ್ಚಿನಿಂದಲೇ ಬರತಕ್ಕದ್ದು.

ಶ್ರೀ ಕೋರನ ದೇವಯ್ಯನವರು

ಡೆಪ್ಯೂಟಿ ಸ್ಪೀಕರರಾದರು.

ಕಾರಿಕು ೧೫—೭—೫೨ರಲ್ಲಿ ಎಸೆಂಬ್ಲಿ ಸಭೆಯು ಬೆಳಿಗ್ಗೆ ೧೧ ಗಂಟೆಗೆ ಪುನಹ ಸೇರಿತು. ಪ್ರಶ್ನೋತ್ತರಗಳ ನಂತರ ಡೆಪ್ಯೂಟಿ ಸ್ಪೀಕರರ ಆಯ್ಕೆಯಾಯಿತು. ಶ್ರೀ ಕೋರನ ದೇವಯ್ಯನವರ ಹೆಸರನ್ನು ಶ್ರೀ ಸಿ. ಕಾಳಪ್ಪನವರು ಸೂಚಿಸಿದರು. ಶ್ರೀ ಲಿಂಗರಾಜಯ್ಯನವರು ಅನುಮೋದಿಸಿದರು. ಬೇರೆ ಯಾರ ಹೆಸರೂ ಸೂಚಿಸಲ್ಪಡದ ಕಾರಣ ಶ್ರೀ ದೇವಯ್ಯನವರು ಸರ್ವಾನುಮತದಿಂದ ಆರಿಸಲ್ಪಟ್ಟರೆಂದು ಸ್ಪೀಕರರಾದ ಶ್ರೀ ಬಿ. ಎಸ್ ಕ.ಶಾಲಪ್ಪನವರು ತಿಳಿಸಿದರು.

ಶಾಶನ ಸಭೆಯ ಮುಂದಾಳಾದ ಶ್ರೀ ಸಿ. ಯಂ ಪೂಣಚ್ಚನವರು ಶ್ರೀ ದೇವಯ್ಯನವರ ಆಯ್ಕೆಯನ್ನು ಪ್ರಶಂಸಿಸುತ್ತಾ ಹೀಗೆ ಹೇಳಿದರು. —ಇವರು ೧೯೩೭ ರಿಂದಲೇ ಕೊಡಗು ಕೌನ್ಸಿಲಿನ ಸದಸ್ಯರಾಗಿದ್ದಾರೆ. ಈಗಿನ ಹೊಸ ಶಾಶನ ಸಭೆಗೂ ಅವರು ಆರಿಸಿ ಬಂದದ್ದು ಹೊಗಳಲರ್ಹವಾದ್ದು. ಇವರು ಹಳೇ ಕಾಂಗ್ರೆಸಿಗರು. ದೇಶದ ಸ್ವಾತಂತ್ರ್ಯ ಚಳವಳಿದಲ್ಲಿ ಭಾಗವಹಿಸಿ ಜೈಲಿಗೆ ಹೋದವರು. ದೇಶಕ್ಕೆ ಜವಾಬ್ದಾರಿ ಸರಕಾರ ದೊರೆಯಲು ಪ್ರಯತ್ನ ನಡೆಸಿದವರಲ್ಲಿ ಒಬ್ಬರು. ಇವರನ್ನು ಡೆಪ್ಯೂಟಿಸ್ಪೀಕರರಾಗಿ ನೇಮಿಸಿದ್ದರಿಂದ ಸ್ಪೀಕರರ ಭಾರವು ಸ್ವಲ್ಪ ಕಡಿಮೆಯಾಗುವುದು. ನಿಮ್ಮ ಈ ಹೊಸ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ನಮ್ಮ ಹೃಪ್ಪೂರ್ವಕ ಸರಕಾರ ವಿದೆ'

ಕೋರನ ದೇವಯ್ಯನವರು ಅಭಿನಂದನೆಗೆ ಉತ್ತರವೀಯುತ್ತಾ ತನ್ನ ಕರ್ತವ್ಯವನ್ನು ಯಾವುದೇ ಪಕ್ಷಪಾತವಿಲ್ಲದೆ ನಿರ್ವಹಿಸುವುದಾಗಿ ಹೇಳಿದರು.

ನಂತರ ಸ್ಪೀಕರರು ತಮ್ಮ ಹಾಗೂ ಡೆಪ್ಯೂಟಿ ಸ್ಪೀಕರರ ಗೈಹಾಜರಿಯಲ್ಲಿ ಯಾರು ಅಧ್ಯಕ್ಷರಾಗಬೇಕೆಂಬ ಬಗ್ಗೆ ಶ್ರೀ ಸಿ ಎ. ಮುಂದಣ್ಣ ಮತ್ತು ಗಂಡಂಕಂಟ್ಟಿ ಮಂಜುನಾಥಯ್ಯನವರ ಹೆಸರನ್ನು ನಿಶ್ಚಯಿಸಿದರು.

ಆ ನಂತರ ಶ್ರೀ ಗಳಾದ ಕೋರನ ದೇವಯ್ಯ (ಅಧ್ಯಕ್ಷ) ಜಿ. ಯಂ ಮಂಜುನಾಥಯ್ಯ, ಸಿ. ಎ. ಮುಂದಣ್ಣ, ಎಂ. ಡಿ. ಮೂಚಯ್ಯ ಮತ್ತು ಕೆ. ಪಿ ಕರುಂಬಯ್ಯ ಇವರುಗಳಿಂದ ಕೂಡಿದ ಪ್ರಿವಿಲೇಜ್ ಕಮಿಟಿಯನ್ನು ನೇಮಿಸಲಾಯಿತು.

ಶ್ರೀ ಗಳಾದ ಎಂ. ಡಿ. ಮೂಚಯ್ಯ, ಜಿ. ಯಂ ಲಿಂಗರಾಜಯ್ಯ, ಪಿ. ಲಕ್ಕ, ಜೆ ಅಹಮ್ಮದ್ ಮತ್ತು ಸಿ. ಕಾಳಪ್ಪ (ಅಧ್ಯಕ್ಷ) ಇವರಿಂದ ಕೂಡಿದ ಪಿಟಿಷನ್ ಕಮಿಟಿಯನ್ನು ನೇಮಿಸಲಾಯಿತು.

ನಂತರ ಫೈನಾನ್ಸ್ ಕಮಿಟಿಗೆ ಡಾ. ಪಿ. ಎಂ. ನಾಣಯ್ಯ, ಪಿ ಡಿ. ಸುಬ್ಬಯ್ಯ, ಪಿ. ಕೆ. ಚೆನ್ನಯ್ಯ ಮತ್ತು ಎಚ್. ಟಿ ವೆಂಕಟ್ಟಣನವರನ್ನು ಆರಿಸಲಾಯಿತು.

ಪಬ್ಲಿಕ್ ಎಕೌಂಟ್ಸ್ ಕಮಿಟಿಗೆ ಶ್ರೀ ಗಳಾದ ಸಿ. ಎ. ಮಂದಣ್ಣ, ಸಿ. ಕೆ. ಕಾಳಪ್ಪ, ಎಂ. ಡಿ. ಮೂಚಯ್ಯ ಮತ್ತು ಕೆ. ಪಿ ಕರುಂಬಯ್ಯ ಇವರುಗಳನ್ನು ಆರಿಸಲಾಯಿತು.

ಇದಾದ ನಂತರ ಶಾಶನ ಸಭೆಯು ಕರಡು ಕಾರ್ಯ ನಿಯಮಗಳನ್ನು ಆಲೋಚನೆಗೆ ತೆಗೆದು ಕೊಳ್ಳಲಾಯಿತು. ಇದರ ಚರ್ಚೆಯು ಕಾ ೧೫ ಮತ್ತು ೧೬ ಎರಡು ದಿನ ನಡೆಯಿತು.

ಕಾ. ೧೬ ರಲ್ಲಿ ಕೌನ್ಸಿಲು ಸಭೆಯು ಬೆಳಿಗೆ ೧೧ ಗಂಟೆಗೆ ಸೇರಿತು. ಪ್ರಶ್ನೋತ್ತರಗಳಾದ ನಂತರ ಕಾರ್ಯಕ್ರಮವು ಮೇರಿ ಮಂತ್ರಿಗಳ, ಸ್ಪೀಕರರ ಡಿಪ್ಯೂಟಿ ಸ್ಪೀಕರರ ಮತ್ತು ಮೆಂಬರುಗಳ ವೇತನದ ಮಸೂದೆಯ ಚರ್ಚೆ ನಡೆಯಬೇಕಿತ್ತು. ಆದರೆ ಈ ಮಸೂದೆಗೆ 'ಸಿ' ಸಂಸ್ಥಾಗಳ ಆಕ್ಟಿನ ಸೆಕ್ಷನ್ ೨೪ (೨) ರಂತೆ ಚೀಫ್ ಕಮಿಷನರ ಶಿಫಾರಸು ದೊರೆತಿಲ್ಲವಾದ ಕಾರಣ ಈ ಮಸೂದೆಯ ಚರ್ಚೆಯನ್ನು ಕಾರೀಕು ೨೧ ರಲ್ಲಿ ತೆಗೆದುಕೊಳ್ಳಲು ಅನುಮತಿ ಕೊಡಬೇಕೆಂದು ಮುಖ್ಯಮಂತ್ರಿ ಶ್ರೀ. ಸಿ. ಎಂ. ಪೂಣಚ್ಚನವರು ಸೂಚಿಸಿದರು. ಸ್ಪೀಕರರು ಒಪ್ಪಿಗೆಯಿತ್ತರು. ಈ ದಿನಕ್ಕೆ ಬೇರೆ ಕಾರ್ಯಕ್ರಮಗಳಿಲ್ಲದ ಕಾರಣ ಕಾರೀಕು ೧೭ರ ವರೆಗೆ ಮುಂಕ್ಕಾಯ ಗೊಂಡಿತು.

ಕೊಡಗು ಸರಕಾರದ

52-53ರ ಅಂದಾಜು ಬಡ್ಜೆಟ್

ಆದಾಯದ ವಿವರಗಳು.		ಖರ್ಚಿನ ವಿವರಗಳು.	
ವ್ಯವಸಾಯ ಆದಾಯ ತೆರಿಗೆ	10,00,000	ಆದಾಯದ ಮೇಲೆ ಕಂದಾಯ	35,900
ಭೂಕಂದಾಯ	3,87,000	ರಿವಿನ್ಯೂ ಇಲಾಖೆ	2,32,700
ಎಕ್ಸೈಸ್ ಉತ್ಪತ್ತಿ	9,86,000	ಎಕ್ಸೈಸ್ ,,	2,96,300
ಸ್ಟಾಂಪು	1,50,000	ಸ್ಟಾಂಪು	4,400
ಫಾರೆಸ್ಟ್ ಉತ್ಪತ್ತಿ	43,00,000	ಫಾರೆಸ್ಟ್ ಇಲಾಖೆ	14 45,000
ರಿಜಿಸ್ಟ್ರೇಶನ್	20,000	ರಿಜಿಸ್ಟ್ರೇಶನ್	4,900
ಮೋಟಾರು ವಾಹನಗಳ ಕಂದಾಯ	4,99,000	ಮೋಟಾರು ವಾಹನಗಳ ಬಗ್ಗೆ	1,08,600
ಇತರ ಕಂದಾಯ	54,600	ನೀರಾವರಿ	1,86,900
ನೀರಾವರಿ ಕಂದಾಯ	2,000	ಆಡಳಿತ ಖರ್ಚು	5,34 900
ಡಿಪಾಜಿಟ್ಟು ಬಡ್ಡಿ	18,800	ನ್ಯಾಯ ಇಲಾಖೆ	86,300
ನ್ಯಾಯ ಇಲಾಖೆಯಿಂದ	17,000	ಜೈಲು ಇಲಾಖೆ	35,400
ಜೈಲು ಇಲಾಖೆ	7,200	ಪೊಲೀಸು	3,31 000
ಪೊಲೀಸು	600	ವಿದ್ಯಾ ಇಲಾಖೆ	12,10,000
ವಿದ್ಯಾ ಇಲಾಖೆ	3,46,000	ವೈದ್ಯ ಇಲಾಖೆ	4,76,000
ವೈದ್ಯ ಇಲಾಖೆ	1,23,100	ಸಾರ್ವಜನಿಕ ಆರೋಗ್ಯ	2,34,000
ಸಾರ್ವಜನಿಕ ಆರೋಗ್ಯ	1 26,000	ವ್ಯವಸಾಯ ಇಲಾಖೆ	11,92,000
ವ್ಯವಸಾಯ ಇಲಾಖೆ	3,74,000	ವೆಟರ್‌ನರಿ	1,63,000
ವೆಟರ್‌ನರಿ	22,000	ಸಹಕಾರ	80,000
ಸಹಕಾರ	2,100	ಕೈಗಾರಿಕೆ	20 000
ಕೈಗಾರಿಕಾ ಶಾಖೆ	10,000	ಇತರ ಇಲಾಖೆಗಳು	38,000
ಇತರ ಇಲಾಖೆ	8,600	ಸಿವಿಲ್ ವರ್ಕ್ಸ್	17,14,500
ಸಿವಿಲ್ ವರ್ಕ್ಸ್	50 800	ಪೆನ್ಷನ್ ಇತರ ಬತ್ಯೆ	2,18,000
ಪ್ರಿಂಟಿಂಗು	1,100	ಪೆನ್ಷನ್ ಕಮ್ಯೂಟ್ ಮಾಡಿದ್ದರ ಬಗ್ಗೆ	5,000
ಸುಪರ್ ಎನ್ಯುನೇಶನ್	200	ಪ್ರಿಂಟಿಂಗು & ಸ್ಟೇಷನರಿ	39,000
ಇತರ ಬಾಬುಗಳು	38,400	ಇತರ ಬಾಬುಗಳು	2,91 600
ಕೇಂದ್ರ ಸರಕಾರದ ಸಹಾಯ	4,66,300	ಒಟ್ಟು (ಓಟು ಮಾಡುವ) ಖರ್ಚು	89,12,700
ಸಂಪೈ ಸಮಗಟ್ಟಲು	200	ಚಾರ್ಜುಗೆ ಮಾಡಿದ ಖರ್ಚು (ಅಂದರೆ ಚೀಫ್ ಕಮಿಷನರ, ಅವರ ಸಿಬ್ಬಂದಿ ಸ್ಪೀಕರರ ಮೊದಲಾದ ವೇತನ	70,700
		ಸಂಪೈ ಸಮಗಟ್ಟಲು	—400
ಜುಮ್ಲ	90,11 000	ಜುಮ್ಲ	89,83 000

ಯೋಜನಾ ಮಂಡಳಿಯ ಸದಸ್ಯರೂ, ಸಂಕಥಮಿತಿಯ ಅಧ್ಯಕ್ಷರೂ ಆದ ಶ್ರೀ. ಜಿ ಎಲ್. ಮೆಹತಾ ಅವರನ್ನು ಅವೇರಿಕೆಯಲ್ಲಿ ಭಾರತದ ರಾಯಭಾರಿಯೆಂದು ನೇಮಿಸಿರುವುದಾಗಿ ವಿದೇಶ ಶಾಖೆಯು ಸಾರಿದೆ.

ಕರ್ನಾಟಕ ಪ್ರಾಂತ ರಚನೆಗೆ ಮೈಸೂರಿನವರ ವಿರೋಧ.

ಮೈಸೂರು ಸಂಸ್ಥಾನವನ್ನು ಮುಖ್ಯ ಭಾಗವಾಗಿ ಒಳಗೊಂಡ ಕರ್ನಾಟಕ ಪ್ರಾಂತ ರಚನೆ ಮಾಡುವದು ಸಂಸ್ಥಾನದ ಜನತೆಗೆ ಬೇಕಿಲ್ಲವೆಂದು ಮೈಸೂರು ಶಾಸನ ಸಭೆಯ ೬೨ ಸದಸ್ಯರು ಮುಖ್ಯಮಂತ್ರಿ ಪಂಡಿತ ನೆಹರೂರವರಿಗೆ ಮನವಿಯೊಂದರಲ್ಲಿ ತಿಳಿಸಿರುವರೆಂದು ತಿಳಿದುಬಂದಿದೆ.

ಈ ಬಗ್ಗೆ ಮುಖ್ಯ ಮಂತ್ರಿಗಳಿಗೆ ಅವರು ಕಳುಹಿಸಿರುವ ಪತ್ರವೊಂದರಲ್ಲಿ ಸದ್ಯದಲ್ಲಿ ಭಾಷಾವಾರು ಪ್ರಾಂತಗಳ ನಿರ್ಮಾಣವು ದೇಶದ ಹಿತಕ್ಕನುಗುಣವಾಗಿಲ್ಲವೆಂದು ತಿಳಿಸಿದ್ದಾರೆ.

'ಮೈಸೂರನ್ನು ಮುಖ್ಯ ವಿಭಾಗವಾಗಿ ಉಳ್ಳ ಕರ್ನಾಟಕ ಪ್ರಾಂತ ನಿರ್ಮಿಸುವುದು ಮೈಸೂರಿನ ಜನತೆಗೆ ಬೇಕಿಲ್ಲ. ಮತ್ತು ಅದೇನಾದರೂ ನಡೆದಲ್ಲಿ, ಈ ಕ್ರಮದಿಂದ ಭಾರಿ ವಿಷಮ ಪರಿಣಾಮಗಳಿಗೆಡೆಕೊಟ್ಟಂತಾಗುವುದಲ್ಲದೆ ಸಂಬಂಧಪಟ್ಟ ಎಲ್ಲಾ ಪಕ್ಷಗಳಿಗೂ ಅಸಮಾಧಾನವುಂಟಾಗುವುದೆಂದೂ ಪತ್ರದಲ್ಲಿ ತಿಳಿಸಲಾಗಿದೆ. ಘಟನಾತ್ಮಕ ನಿಯಮಗಳಿಗನುಗುಣವಾಗಿ ನಿರ್ಧಾರವನ್ನು ಮಾಡುವ ಸ್ವಾತಂತ್ರ್ಯ ಪಡೆಯುವ ಮೊದಲು ಮುಖ್ಯ ಮಂತ್ರಿಗಳು ಈ ಬಗ್ಗೆ ಯಾವುದೇ ನಿರ್ಧಾರಗಳನ್ನು ಮಾಡಕೂಡದೆಂದು ಅವರು ಸೂಚಿಸಿದ್ದಾರೆ. ಈ ಪತ್ರಕ್ಕೆ ಅಂಕಿತ ಹಾಕಿರುವವರಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ಸದಸ್ಯರು, ಮತ್ತು ವಿರೋಧಿ ಪಕ್ಷದ ಸದಸ್ಯರೂ ಮತ್ತು ವಿಧಾನ ಸಭೆಯ ಸಮೂಹವಾದಿ ಮತ್ತು ಕಮ್ಯುನಿಸ್ಟ ಸದಸ್ಯರೂ ಇದ್ದಾರೆ.

ವಾರ್ತೆ.

ಮುಂಬಯಿ ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ವರೆಗೆ ಸೇವೆ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಮೆಡಿಕಲ್ ಡಿಗ್ರಿಗಳನ್ನು ಕೊಡತಕ್ಕದಲ್ಲವೆಂದು ಮುಂಬಯಿ ವಿಶ್ವವಿದ್ಯಾಲಯವು ನಿರ್ಧರಿಸಲಿದೆ ಎಂದು ತಿಳಿಯಬರುತ್ತದೆ.

ವಿಶಾಲ ತಳಹದಿಯ ಮೇಲೆ ಸರ್ವಮಾನ್ಯ ಕಾರ್ಯಕ್ರಮವುಳ್ಳ ಸಂಯುಕ್ತ ಪಕ್ಷವೊಂದನ್ನು ರಚಿಸುವ ಪ್ರಯತ್ನ ಮಾಡುವುದಕ್ಕಾಗಿ ಅಖಿಲ ಭಾರತ ಎಡಪಕ್ಷಗಳೆಲ್ಲ ದಿಲ್ಲಿಯಲ್ಲಿ ಆಗಸ್ಟ್ ತಿಂಗಳಲಿ ಸಭೆ ಸೇರಲಿವೆಯೆಂದು ಕ್ರಾಂತಿಕಾರಿ ಸಾಮ್ಯವಾದಿ ಪಕ್ಷದ ಲೋಕ ಸಭೆಯ ಸದಸ್ಯ ಶ್ರೀ ಚೌಧರಿ ಮತ್ತು ಶ್ರೀ. ಕಾಂತನ್ ನಾಯರರು ಹೇಳಿರುವರು.

ಗರ್ಭಾವಸ್ಥೆಯಿಂದ ಗೋರಿಗೆ ಹೋಗುವವರೆಗೂ ಪ್ರತಿಯೊಬ್ಬ ಮನುಷ್ಯನ ಯೋಗಕ್ಷೇಮವನ್ನು ಸರಕಾರವು ನೋಡಬೇಕೆಂಬ ತತ್ವದಲ್ಲಿ ತನಗೆ ವಿಶ್ವಾಸವಿದೆಯೆಂದು ಕೂಲಿಕಾರ ಮಂತ್ರಿ ಶ್ರೀ ವಿ. ವಿ. ಗಿರಿಯವರು ಗುಜರಾತದ ಕೂಲಿಕಾರ ಸಂಘದ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ಅಮೆರಿಕದ ಅಧ್ಯಕ್ಷ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಜನರಲ್ ಐಸೆನ್‌ಹೋವರರು ಚುನಾಯಿತರಾಗಿರುವರು.

'ದೇಶದ ಪುನತೆ ಅದರ ವಿಸ್ತೀರ್ಣದಲ್ಲಿಲ್ಲ; ಬದಲು ಜನತೆಯ ಯೋಗ್ಯತೆಯ ಮೇಲಿದೆ.'

ಮುಖ್ಯ ಮಂತ್ರಿ ಪೂಣಚ್ಚನವರ ಬಡ್ಜೆಟ್ ಭಾಷಣ.

ಕೊಡಗು ಶಾಸನ ಸಭೆಯ ಪ್ರಥಮ ಅಧಿವೇಶನವು ತಾರೀಕು ೧೪ರಲ್ಲಿ ಶಾಸನ ಸಭಾಂಗಣದಲ್ಲಿ ಪ್ರಾರಂಭವಾಯಿತು, ಶ್ರೀ ಎ. ಸಿ. ತಿಮ್ಮಯ್ಯನವರಲ್ಲದೆ ಎಲ್ಲಾ ಸದಸ್ಯರು ಹಾಜರಿದ್ದರು. ಪ್ರೇಕ್ಷಕರು ತುಂಬಾ ನೆರೆದಿದ್ದರು. ಹನ್ನೊಂದು ಗಂಟೆಗೆ ಕಾರ್ಯ ಕಲಾಪಗಳು ಪ್ರಾರಂಭವಾದವು. ಪ್ರಥಮತವಾಗಿ ರಾಷ್ಟ್ರಪಿತ ನ ನೆನಪಿಗಾಗಿ ಎಲ್ಲರೂ ಎದ್ದು ಎರಡು ನಿಮಿಷಗಳ ವರೆಗೆ ಮೌನ ಪ್ರಾರ್ಥನೆ ಮಾಡಲಾಯಿತು. ನಂತರ ಚೀಫ್ ಕಮಿಷನರು ತಮ್ಮ ಪ್ರಾರಂಭ ಭಾಷಣ ಮಾಡಿದರು. (ಇತರ ವಿವರವನ್ನು ಬೇರೆಡೆ ಕೊಡಲಾಗಿದೆ) ಚೀಫ್ ಕಮಿಷನರ ಭಾಷಣದ ನಂತರ ಸಭೆಯು ಮಧ್ಯಾಹ್ನ ೨-೩೦ ಗಂಟೆಗೆ ಪುನಃ ಸೇರಲಾಯಿತು. ಕೊಡಗು ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಸಿ. ಎಂ. ಪೂಣಚ್ಚನವರು ಕೊಡಗು ಸರಕಾರದ ೧೨-೫೩ನೆ ಸಂವತ್ಸರದ ಅಂದಾಜು ಬಡ್ಜೆಟ್ಟನ್ನು ಸಭೆಗೆ ಮುಂದಿಟ್ಟರು. ಅವರ ಬಡ್ಜೆಟ್ ಭಾಷಣದ ಸಾರಾಂಶ ಹೀಗಿದೆ.

ಬಡ್ಜೆಟ್ ಭಾಷಣ.

೧೯೫೧-೫೨ರ ಸಾಲಿನ ಪರಿಷ್ಕೃತ ಲೆಕ್ಕವನ್ನೂ, ೧೯೫೨-೫೩ರ ಅಂದಾಜು ಬಡ್ಜೆಟ್ಟನ್ನೂ ಸಭೆಯ ಮುಂದಿಡಲು ಅಪ್ಪಣೆ ಕೇಳುತ್ತೇನೆ. ನಾವು ಮಂಡಿಸುತ್ತಿರುವ ಈ ಸಂಸ್ಥಾನದ ಪ್ರಥಮ ಜನಪ್ರಿಯ ಬಡ್ಜೆಟ್ಟಿನ ಅಂಶಗಳನ್ನು ಪರಿಶೀಲಿಸಿ ಅದನ್ನು ಮಂಜೂರು ಮಾಡುವುದು ಈ ಸಭೆಯ ಹಕ್ಕಾಗಿದೆ. ನಿಮ್ಮ ಮುಂದೆ ನಿಂತಾಗ ಕೊಡಗಿನ ಜನತೆಯು ತನಗೆ ಜವಾಬ್ದಾರಿ ಸರಕಾರ ಬೇಕೆಂದು ಹೋರಾಡುತ್ತಿದ್ದ ಕಾಲದನೆನಪಾಗುತ್ತದೆ. ೧೯೪೭ ನಂತರ ಜಾರಿಗೆಬಂದ ಹಿಂದೂದೇಶದ ರಾಷ್ಟ್ರೀಯ ಸರಕಾರವು ನಮ್ಮ ಬೇಡಿಕೆಗಳನ್ನು ಲಾಲಿಸಿ ಕೊಡಗನ್ನೊಳಗೊಂಡ ಆರು 'ಸಿ' ವರ್ಗದ ಸಂಸ್ಥಾನಗಳಿಗೆ ಜವಾಬ್ದಾರಿ ಸರಕಾರ ಕೊಟ್ಟುದಕ್ಕಾಗಿ ಅವರಿಗೆ ಕೃತಜ್ಞತೆಯನ್ನರ್ಪಿಸುವುದು ನನ್ನ ಕರ್ತವ್ಯವಾಗಿದೆ. ಕೊಡಗಿನ ಜನತೆಯ ಬಗ್ಗೆ ತುಂಬಾ ಕಾಳಜಿ ಭೂತಿಯುಳ್ಳ ಭಾರತದ ಮುಖ್ಯ ಮಂತ್ರಿ ಜವಾಹರಲಾಲರಿಗೆ ನಮ್ಮ ಗೌರವಪೂರಿತ ಕೃತಜ್ಞತೆಗಳಿವೆ. ಭಾರತ ಜನತಾ ಸಭೆಯು 'ಬಿ,ಸಿ,ವರ್ಗದ ಸಂಸ್ಥಾನಗಳ ಬಗ್ಗೆ ಚರ್ಚೆ ಬಂದಾಗ ನಮ್ಮ ಹುಬ್ಬೇರಿಸುವಂತಾಗಲು ಕೊಡಗಿನ ಮಟ್ಟಿಗೆ ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು ನಮ್ಮ ಸೌಭಾಗ್ಯವೆನ್ನಬಹುದು. ಈ ಸಹಾನುಭೂತಿಗಳಿಗೆ ಕೊಡಗಿನ ಜನತೆಯು ಚಿರಋಣಿಯಾಗಿದೆ. ಹಿಂದೀ ಒಕ್ಕೂಟದ ಒಂದು ಚಿಕ್ಕ ಅಂಗವಾಗಿರುವ ನಾವು ಹಿಂದೂ ದೇಶದ ಭದ್ರತೆ ಹಿತಸಾಧನೆಗಳಿಗಾಗಿ ನಮ್ಮ ಹೃತ್ಪೂರ್ವಕ ಸಹಾಯವನ್ನೀಡುವ ಪ್ರತಿಜ್ಞಾಬದ್ಧರಾಗಿರುವೆವು.

೧೯೫೨-೫೩ರ ಬಡ್ಜೆಟ್ಟು ಉಳಿತಾಯ ಬಡ್ಜೆಟ್ಟಿನ್ನಬಹುದಾದರೂ ಉಳಿತಾಯವು ಕೇವಲ ರೂ. ೨೪ ಸಾವಿರವಾದ್ದರಿಂದ ಅದನ್ನು ಹಾಗೆ ಪರಿಗಣಿಸಲಾಗುವದಿಲ್ಲ. ಆದರೂ ಇದು ಮೋಕಾ ಬಡ್ಜೆಟ್ಟಾಗದೆ ಸಮತೂಗಲ್ಪಟ್ಟ ಬಡ್ಜೆಟ್ಟಾಗಿದೆಯೆಂದು ಹೇಳಲು ಸಂತೋಷವಾಗುತ್ತದೆ.

೧೯೫೧-೫೨ರ ಪರಿಷ್ಕೃತ ಅಂದಾಜಿನ ಪ್ರಕಾರ ಆ ವರ್ಷಕ್ಕೆ ರೂ. ೭೨೦೦೦ ಖೋತೆಯಾಗಿದ್ದು ಇಂಡಿಯಾ ಸರಕಾರವು ಹಿಂದಳಿಶಿಲ್ಕಿನಿಂದ ರೂ. ೬ ಲಕ್ಷ ವಿನಿಯೋಗಿಸಬಹುದೆಂದು ಮಂಜೂರ್ಮಾಡಿತ್ತು. ಪ್ರತಿ ಇಲಾಖೆಯಲ್ಲಿ ಖರ್ಚನ್ನು ಕಡಿಮೆ ಮಾಡಲು ಏನೇ ಪ್ರಯತ್ನ ಹಟ್ಟಿರೂ ವ್ಯವಸಾಯ ಆದಾಯ ತೆರಿಗೆಯಲ್ಲಿ ಬರಬಹುದೆಂದು ಅಂದಾಜು ಮಾಡಿದ್ದ ೪ ಲಕ್ಷ ರೂಪಾಯಿಗಳಲ್ಲಿ ಕೇವಲ ೩ ಲಕ್ಷ ಮಾತ್ರ ಬಂದ ಕಾರಣ ಖೋತೆಯನ್ನು ಸಮಗಟ್ಟಲಾಗಲಿಲ್ಲ. ಆದರೆ ಫೈನಾನ್ಸು ಕಮಿಟಿಯು ಸಲಹೆಯಂತೆ ಖರ್ಚು ಮಾಡಲೆಂದು ಇಟ್ಟಿದ್ದ ರೂಪಾಯಿ ೧,೧೨೦೦೦ ದಲ್ಲಿ ಕೇವಲ ೫೬,೩೦೦ ಮಾತ್ರ ಖರ್ಚಾಗಿ ಬಾಕಿ ಉಳಿದುದರಿಂದ ೫೧-೫೨ರ ಅಂತ್ಯದಲ್ಲಿ ಕೇಂದ್ರ ಸರಕಾರವು ಮಂಜೂರ್ಮಾಡಿದ ಏಳು ಲಕ್ಷದ ಪೂರ್ತವನ್ನು ವಿನಿಯೋಗ ಆಗಲಾರದು.

೧೯೫೧ನೇ ಏಪ್ರಿಲ್ ಒಂದರಲ್ಲಿ ಸರಕಾರದ ಶಿಲ್ಕು ರೂ. ೭೭,೬೯,೭೦೭ ಇತ್ತು. ೫೧-೫೨ರಲ್ಲಿ ಸರಕಾರದ ಆದಾಯ ರೂ. ೬೬,೨೬,೫೦೦ ಬಂದು ರೂ. ೭೫೪೬೫೦೦ ಖರ್ಚಾಗಿದ್ದರಿಂದ ತಾ. ೧-೪-೫೨ರಲ್ಲಿ ಸರಕಾರದ ಶಿಲ್ಕು ರೂ. ೭೦೪೯೭೦೭ ಉಳಿದಿದೆ.

೧೯೫೧ನೇ ಡಿಸೆಂಬರಿನಲ್ಲಿ ನೂರು ಟನ್ ಗಂಧವನ್ನು ಹರಾಜಿಗೆ ಇಟ್ಟಿದ್ದೆವು. ಆದರೆ ವ್ಯಾಪಾರಿಗಳು ಒಪ್ಪಂದ ಮಾಡಿಕೊಂಡು ಕಡಿಮೆ ದರಕ್ಕೆ ಬಿಡ್ ಮಾಡಿದ ಕಾರಣ ಅಂದಾಜು ಮಾಡಿದ ಎಡುವರೆ ಲಕ್ಷದ ಬದಲು ಕೇವಲ ೧೧ ಸಾವಿರ ಮಾತ್ರ ದೊರೆಯುವಂತಿದ್ದರಿಂದ ಹರಾಜನ್ನು ನಿಲ್ಲಿಸಲಾಯಿತು. ಇದರ ಮೂರನೆ ಟೆಂಡರೂ ಬಾರದ್ದರಿಂದ ಪುನಹ ಜುಲೈಯಲ್ಲಿ ಹರಾಜು ಇಡಲಾಗಿ ಪುನಹ ವ್ಯಾಪಾರಿಗಳು ಒಂದಾಗಿಕೊಂಡು ಯೋಗ್ಯ ಬೆಲೆ ದೊರೆಯದಾಯಿತು. ಆದ್ದರಿಂದ ವೈಸೂರು ಸರಕಾರದೊಡನೆ ಈ ಸರಕಾರವು ಸಮಾಲೋಚಿಸಿ ಈ ನೂರು ಟನ್ ಗಂಧವನ್ನು ನೂರುವ ಏರ್ಪಾಡು ಮಾಡಿ ಅಂದಾಜು ಮಾಡಿದ ರೂ. ೨೫ ಲಕ್ಷಕ್ಕಿಂತಾ ಹೆಚ್ಚಿನ ಉತ್ಪತ್ತಿ ದೊರೆಯುವ ಸಾಧ್ಯತೆ ಇದೆ.

೧೯೫೨ನೇ ಜನವರಿಯಿಂದ ೫೦ನೇ ಡಿಸೆಂಬರ್ ವರೆಗೆ ಕೊಡಗು ಸರಕಾರವು ೯,೦೦,೪೧೭ ರೂಪಾಯಿಗಳನ್ನು ಆಹಾರ ಬೋನಸಾಗಿ ಸಂಪಾದಿಸಿತು. ಇದರಲ್ಲಿ ರೂ. ೫,೩೬,೩೫೬ನ್ನು ೧೯೫೯-೫೦ರ ಸಾಲಿಗೆ ಸರಕಾರದ ಆದಾಯವಾಗಿ ಸೇರಿಸಿಕೊಳ್ಳಲಾಯಿತು. ಉಳಿದದ್ದರಲ್ಲಿ ರೂಪಾಯಿ ೨೬೫,೦೮೧ನ್ನು ೫೦-೫೧ರಲ್ಲಿ 'ಹೆಚ್ಚುಬೆಳೆಯಿರಿ' ಯೋಜನೆಗೆ ದೊರೆಯಬೇಕಿದ್ದ ಕೇಂದ್ರ ಸರಕಾರದ ಆಹಾರ ಮಂತ್ರಿಗೆ ದೊರೆಯದ ಕಾರಣ ವಿನಿಯೋಗಿಸಲಾಯಿತು. ಉಳಿದ ಹಣವು ಇನ್ನೂ ಸಮಗಟ್ಟಲು ನಿಂತಿದೆ. ಪಶು ಬೆಲ್ಲ ಯೋಜನೆಯನ್ನು ನಿಲ್ಲಿಸಲಾಗಿದೆ. ಹೆಚ್ಚು ಬೆಳೆಯಿರಿ ಪಶ್ಚಾತ್ ಪಶು ಬೆಲ್ಲ ಯೋಜನೆಯ ಬಗ್ಗೆ ಕೇಂದ್ರದಿಂದ ೩ ಲಕ್ಷ ೧೯೫೩ಕ್ಕೆ ಬರಲಿದೆ. ಕೊಡಗಿನ ಮಲೇರಿಯಾ ಇಲಾಖೆಯ ಸರ್ವ ಜವಾಬ್ದಾರಿಯನ್ನು ೫೨-೫೩ರಿಂದ ನಾವೇ ವಹಿಸಿಕೊಳ್ಳಬೇಕಾಗಿದೆ.

೧-೪-೫೨ರಲ್ಲಿದ್ದ ರೂ. ೭೦,೪೯,೭೦೭ ಶಿಲ್ಕಿನಲ್ಲಿ ರೂ. ೧೫ ಲಕ್ಷ ಕೇಂದ್ರ ಸರಕಾರದಲ್ಲಿ ೧೩ ದರದ ಓಡ್ಡಿಯ ಡಿಪಾಜಿಟ್ಟಾಗಿದೆ.

೧೯೫೧ರಲ್ಲಿ ಕೊಡಗು ವ್ಯವಸಾಯ ಆದಾಯ ತೆರಿಗೆ ಆಕ್ಟು, ಕೊಡಗು ಗ್ರಾಮ ಪಂಚಾಯಿತ ತಿದ್ದುಪಡಿ ಆಕ್ಟು' ಕೊಡಗು ಮುನ್ಸಿಪಲ್ ರೆಗ್ಯುಲೇಶನ್ ತಿದ್ದುಪಡಿ ಆಕ್ಟು, ಕೊಡಗು ಲೇಂಡ್ ಡೆವಲಪ್‌ಮೆಂಟ್ ಆಕ್ಟು, ಕೊಡಗು ಬಿಲ್ಡಿಂಗ್(ಬಾಡಿಗೆ ನಿಯಂತ್ರಣ) ಆಕ್ಟು ಇವುಗಳಿಗೆ ಒಕ್ಕೂಟದ ಪ್ರೆಸಿಡೆಂಟರ ಅನುಮತಿ ದೊರೆತಿದೆ.

೧೯೫೨-೫೩ ರಲ್ಲಿ ಬತ್ತ ವ್ಯವಸಾಯದ ವಿಸ್ತೀರ್ಣವು ೯,೧೫೪ ಏಕ್ರೆಯಾಗಿದೆ. ಹಿಂದಿನ ವರ್ಷ ಇದು ೮೯.೬೪೦ ಆಗಿತ್ತು. ಹೀಗೆ ೬೩೬ ಏಕ್ರೆ ಕಡಿಮೆಯಾಗಲು ಅಕಾಲವೃಷ್ಟಿಯು ಕಾರಣವಾಗಿದೆ ವರ್ಷಕ್ಕೆ ೬೧,೬೫೦ ಟನ್ ಬತ್ತ ಅಥವ ೪೧,೧೦೦ ಟ್ಟ ಅಕ್ಕಿಯು ಅಂದಾಜುಮಾಡಲ್ಪಟ್ಟಿತ್ತು. ಕಾಫಿ ಮತ್ತು ಕಿತ್ತಳೆ ಫಸಲು ಚೆನ್ನಾಗಿತ್ತು. ಏಲಕ್ಕಿ ಬೆಳೆ ಕಡಿಮೆ ಇತ್ತಲ್ಲದೆ ಬೆಲೆಯಲ್ಲೂ ಇಳಿತವಿತ್ತು.

೧೯೫೧ ರಲ್ಲಿ ಳಿ ಮಾಜಿ ಸಿಪಾಯಿಗಳಿಗೆ ಭೂಮಿ ಕೊಡಲಾಯಿತು. ಈ ವರೆಗೆ ಒಟ್ಟು ೫೩೮ ಜನರಿಗೆ ಕೊಡಲಾಗಿದೆ. ಕಳೆದ ಫೆಬ್ರುವರಿಯಲ್ಲಿ ಮಾಜಿಸಿಪಾಯಿಗಳ ಸ್ಥಿತಿಯನ್ನು ಪರಿಶೀಲಿಸುವ ಬಗ್ಗೆ ಕೇಂದ್ರ ಸರಕಾರದಿಂದ ಬಂದಿದ್ದ ಮೇಜರ್ ರಾಮಚಂದ್ರ ಇವರು ಕೊಡಗಿನ ಮಾಜಿ ಸಿಪಾಯಿಗಳ ಪುನರ್ನಿವೇಶನದ ಕಾರ್ಯವನ್ನು ತುಂಬಾ ಪ್ರಶಂಸಿದ್ದಾರೆ.

ರವಿನ್ಯೂ ಇಲಾಖೆಯಲ್ಲಿ ಸರ್ವೆ ಕೆಲಸವು ಹೆಚ್ಚಾದ್ದರಿಂದ ಒಂಭತ್ತು ತಾತ್ಕಾಲಿಕ ಶಾನುಬೋಗರನ್ನು ಹೆಚ್ಚಿಸಲಾಯಿತು ಸೆಟ್ಲ್‌ಮೆಂಟ್ ಇಲಾಖೆಯಲ್ಲಿ ಅ. ಸೆಟ್ಲ್‌ಮೆಂಟ್ ಆಫೀಸರು, ಅರು ಸರ್ವೆಯರುಗಳು, ಎರಡು ಶಾನುಬೋಗರು, ಒಬ್ಬ ಟ್ರೇಸರರು ಹೀಗೆ ಹೆಚ್ಚು ಮಾಡಲಾಯಿತು. ಪೊನ್ನಂಪೇಟೆ ವಿಭಾಗ ಶ್ರೀಮಂಗಲ ನಾಡುಗಳಲ್ಲಿ ಸೆಟ್ಲ್‌ಮೆಂಟ್ ಕೆಲಸ ಮುಗಿದಿದೆ. ೧೯೫೨ರಿಂದ ಹೊಸಕಂದಾಯದ ದರವನ್ನು ಹಾಕುವುದಲ್ಲದೆ ೫ ವರ್ಷಗಳಲ್ಲಿ ಸೆಟ್ಲ್‌ಮೆಂಟ್ ಕೆಲಸವನ್ನು ಮುಗಿಸಲಾಗುವುದು.

೧೯೫೧ರಲ್ಲಿ ೩೫೦ ಏಕರೆ ಕಾಡ ಕಡಿದು ಟಿಂಬರ್ ಮಾರಾಟ ಮಾಡಿದ್ದಲ್ಲದೆ ಆ ಭಾಗದಲ್ಲಿ ತೇಗ ನೆಡಲಾಯಿತು ಮೂರ್ಕಟ್ಟೆ ರೇಂಜಿನಲ್ಲಿ ೧೬೪ ಏಕರೆಗಳಲ್ಲಿ ಎರಡು ಕೂಪುಗಳನ್ನೂ, ಸಂಪಾಜೆಯಲ್ಲಿ ೭೫ ಏಕರೆಗಳ ಒಂದು ಕೂಪನ್ನೂ ರೂ. ೧,೯೫,೦೦೦ ಕ್ಕೆ ಕೊಡಲಾಯಿತು. ಈ ವರ್ಷ ೭೫೦ ಏಕರೆ ಟಿಂಬರ್ ಕಡಿದು ಸುಮಾರು ೬ ಲಕ್ಷ ಘನ ಅಡಿ ಮರ ಮಾರುವದಲ್ಲದೆ ೧೦೦ ಟನ್ ಗಂಧ ಮಾರಲು ನಿಶ್ಚಯಿಸಿದೆ. ಈಗ ಇಲಾಖೆಯಲ್ಲಿ ೩೭ ಆನೆಗಳಿವೆ.

'ಸಿ' ಸಂಸ್ಥಾನಗಳ ಆಕ್ಟನ್ನು ಕೊಡಗಿನಲ್ಲಿ ಜಾರಿಗೆ ತಂದುದರಿಂದ ಆಡಳಿತದ ಖರ್ಚು ಹೆಚ್ಚಾಗಿದೆ. ಪೊಲೀಸು ಇಲಾಖೆಯಲ್ಲಿ ಒಬ್ಬ ಇನ್ಸ್‌ಪೆಕ್ಟರು, ೫ ಜಿ. ಕಾನ್ಸ್‌ಟೇಬಲರು, ೧೧೦ ಕಾನ್ಸ್‌ಟೇಬಲುಗಳನ್ನು ಚುನಾವಣೆಯ ಸಮಯದಲ್ಲಿ ಹೆಚ್ಚಿಸಲಾಗಿತ್ತು. ಕಾರ್ಯಕಾಲಿಕವಾಗಿರುವ ವಯರ್‌ಲೆಸ್ ಕೇಂದ್ರವನ್ನು ಖಾಯಂ ಮಾಡಲಾಗಿದೆ.

ಕಳೆದ ಫೆಬ್ರುವರಿಯಿಂದ ಉತ್ತರ ಕೊಡಗಿನಲ್ಲಿ ೨೦ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಈ ಯೋಜನೆಯನ್ನು ದಕ್ಷಿಣ ಕೊಡಗಿಗೂ ವಿಸ್ತರಿಸಲಾಗುವದು. ಮೂಲ ಶಿಕ್ಷಣದಲ್ಲಿ ತರಬೇತು ಕೊಡಲಾಗುತ್ತಿದೆ ಇಂಡಿಯಾ ಸರಕಾರವು ಮೂಲ ಶಿಕ್ಷಣ ಶಾಲೆಗಳನ್ನು ತೆರೆಯುವ ಅನುಮತಿ ಇತ್ತರಿಯಲಕ್ಕ ಕೇಂದ್ರಗಳಲ್ಲಿ ಹಾಗೆ ಮಾಡಲಾಗುವದು.

ಪ್ರಾಂತೀಕ ವೈದ್ಯಕೀಯ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ. ವೀರಾಜಪೇಟೆ ಆಸ್ಪತ್ರೆಯಲ್ಲೂ ಎಕ್ಸ್‌ರೇ ಅನುಕೂಲತೆ ಮಾಡಲಾಗಿದೆ. ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಕಣ್ಣಿನ ನೋವಿಗೆ ಚಿಕಿತ್ಸೆಯ ಏರ್ಪಾಡು ಮಾಡಲಾಗಿದೆ. ಮಲೇರಿಯಾ ನಿವಾರಣಾ ಕೆಲಸ ಚೆನ್ನಾಗಿ ನಡೆದಿದೆ. ಮೂರ್ಕಾರಿ ಪ್ರತಿ ಮನೆಗೆ ಡಿ. ಡಿ. ಟಿ. ಸ್ಪ್ರೆ ಮಾಡಲಾಗಿದೆ. ಒಟ್ಟು ೧೯೯,೩೬೫ ಮನೆಗಳಿಗೆ ಸ್ಪ್ರೆ ಮಾಡಲಾಗಿದೆ. ಒಟ್ಟು ೧೯೯,೩೬೫

ಜನರಿರುವ ೩೬೫ ಗ್ರಾಮಗಳಲ್ಲಿ ಕೆಲಸ ಪೂರೈಸಲಾಗಿದೆ. ೭–೧೧ ಹೊಸ ವೇಕ್ಸಿನೇಶನ್ನೂ, ೨೧೧೩ ಮರುವೇಕ್ಸಿನೇಶನ್ನೂ ನಡೆದಿದೆ. ಗುನೂರು ೪೦೦ ಬೋರ್ ಹೋಲ್ ಶಾಯಿಖಾನೆಗಳನ್ನು ಏರ್ಪಡಿಸಿದ್ದಲ್ಲದೆ ಗ್ರಾಮಗಳ ಬಾವಿಗಳಿಗೆ ಕ್ಲೋರಿನ್ ಹಾಕಲಾಗಿದೆ. ವೈದ್ಯಕೀಯ ಪರಿಶೋಧನಾ ಕೇಂದ್ರದಲ್ಲಿ ೧೭೩ ಮಣ್ಣು ಪರೀಕ್ಷೆಯ ಕಾರ್ಯ ನಡೆದಿದೆ. ೧೫೨ ಕೆರೆಗಳ ರಿಪೇರಿಯೊಂದಿಗೆ ೧೧೪ ಏಕ್ರೆ ಬತ್ತ ಜೆಳೆ ಆಗಿದೆ. ೧೬ ಕಟ್ಟೆಗಳಿಂದಾಗಿ ೫೭೧ ಏಕರೆ ಭೂಮಿಗೆ ನೀರು ದೊರೆಯುವಂತಾಗಿದೆ. ಇಲ್ಲಿ ಬೆಳ್ಳಿ ೧೪ ಸೆಟ್ ಪಂಪುಗಳನ್ನು ವ್ಯವಸಾಯಗಾರರಿಗೆ ಸಹಾಯ ಕೊಡಲಾಗುತ್ತಿದೆ ಕೂಡಿಗೆಯಲ್ಲಿ ಸ್ವ ವಸಾಯ ಶಾಲೆಯೊಂದನ್ನು ತೆರೆಯಲಾಗುವುದು

ಸಾಕಷ್ಟು ಸಂಖ್ಯೆಯಲ್ಲಿ ಗೂಳಿಗಳು ಇಲ್ಲದ್ದರಿಂದ ಹಸುಗಳಿಗೆ ಕೃತಕ ಗರ್ಭದಾನದ ನಾಲ್ಕು ಕೇಂದ್ರಗಳನ್ನು ತೆರೆಯಲಾಗುವುದು. ಬಾಜೂರು ಆದರ್ಶ ಗ್ರಾಮ ಕೇಂದ್ರವು ಚೆನ್ನಾಗಿ ಕೆಲಸ ನೂಡುತ್ತಿದೆ. ಕೋಳಿ ಸಾಕಲು ಶಕ್ತ ವ್ಯವಸ್ಥೆ ಮಾಡಿ ಅದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಮಡಿಕೇರಿಯಲ್ಲಿರುವ ಡೈರಿ ಫಾರಂನಿಂದ ೧೯೫೧ರಲ್ಲಿ ೩೬ ಸಾವಿರ ಪೌಂಡು ಹಾಲು ಮಾರಲಾಯಿತು ಬೆಂಗಳೂರಿನ ಡೈರಿ ರಿಸರ್ಚ್ ಇನ್ಸ್ಟಿಟ್ಯೂಟಿನಿಂದ ಏಳು ಹಸು ಮತ್ತು ನಾಲ್ಕು ಕರುಗಳನ್ನು ಕೊಂಡುಕೊಳ್ಳಲಾಯಿತ. ಈ ವರ್ಷ ಕೊಡ್ಲಿಪೇಟೆ, ಬಾಳೆಲೆ, ಮರಿಸಾಡುಗಳಲ್ಲಿ ಗ್ರಾಮಾಂತರ ಆಸ್ಪತ್ರೆಗಳನ್ನು ತೆರೆಯಲಾಗುವುದು. ದನಗಳಿಗೆ ಕೃತಕ ಗರ್ಭದಾನ ಮಾಡುವ ವ್ಯವಸ್ಥೆಯನ್ನು ಎಲ್ಲಾ ಆಸ್ಪತ್ರೆಗಳಲ್ಲಿ ತರಲಾಗುವದು.

ಕೊಡಗು ಸಹಕಾರಿ ಬ್ಯಾಂಕಿಗೆ ದೀರ್ಘ ವಾಯಿದೆಯ ಸಾಲ ಕೊಡಲನ ವಾಗುವಂತೆ ಒಬ್ಬ ಇನ್ಸ್‌ಪೆಕ್ಟರು ಮತ್ತೊಬ್ಬ ಕ್ಲರ್ಕರನ್ನು ಮೇ ಅಂತ್ಯದ ವರೆಗೆ ಕೊಡಲಾಗಿತ್ತು ಅಲ್ಲಿಯವರೆಗೆ ಕೊಡಗಿನ ಸಹಕಾರ ಬ್ಯಾಂಕುಗಳು ತೆರೆಯಲ್ಪಟ್ಟವು. ಇಂಥಾ ಹತ್ತು ಬ್ಯಾಂಕುಗಳು ವಿವಿಧ ಭಾಗಗಳಲ್ಲಿ ಕೆಲಸ ನೂಡುತ್ತಿವೆ. ಈ ವರ್ಷ ಮಡಿಕೇರಿ ಮತ್ತು ಪೂನಾರ್ಯಾಡುಗಳಲ್ಲಿ ಬ್ಯಾಂಕುಗಳನ್ನು ತೆರೆಯಲಾಗುವುದು.

ಈ ವರ್ಷ ಕೊಡಗು ಸಹಕಾರಿ ಬ್ಯಾಂಕಿನ ಮತ್ತು ಸಹಕಾರ ಫೆಡರೇಶನಿನ ಲೆಕ್ಕಗಳನ್ನು ಚಾರ್ಟರ್ಡ್ ಲೆಕ್ಕಪರಿಶೋಧಕರಿಂದ ಪರಿಶೀಲಿಸುವ ಏರ್ಪಾಡು ಮಾಡಲಾಗಿದೆ. ರಿಸರ್ವ್ ಬ್ಯಾಂಕಿನ ಅ. ಜೇಷ್ ಅಧಿಕಾರಿಯವರು ಇಳಿದ ಜನವರಿಯಲ್ಲಿ ಕೊಡಗಿಗೆ ಬಂದು ಇಲ್ಲಿಯ ಸಹಕಾರ ಚಳವಳಿಯನ್ನು ಪರಿಶೀಲಿಸಿದರು.

ರಸ್ತೆ ರಿಪೇರಿಯ ಬಗ್ಗೆ ಸರಕಾರವು ಹೊಸ ನೀತಿಯನ್ನು ಅನುಸರಿಸಲಿದೆ. ರಿಪೇರಿ ಮಾಡಿದ ಭಾಗವನ್ನು ತಾರು ಹಾಕಿ ಆ ರೀತಿ ಕೆಲವು ವರ್ಷಗಳಲ್ಲಿ ಕೊಡಗಿನ ಅಷ್ಟೋತ್ತರ ರಸ್ತೆಗಳನ್ನು ಪೂರ್ತಿಗೊಳಿಸಲಾಗುವುದು. ಈ ವರ್ಷ ಕೂಡಿಗೆಯಲ್ಲಿ ಮೂಲ ಶಿಕ್ಷಣ ಮತ್ತು ವ್ಯವಸಾಯ ಶಾಲೆ ಕಟ್ಟಡವನ್ನೂ, ಕೂಡಿಗೆಯಲ್ಲಿ ಡೈರಿ ಫಾರಂ ಕಟ್ಟಡವನ್ನೂ, ಮಡಿಕೇರಿಯಲ್ಲಿ ಕಾಲೇಜು ಕಟ್ಟಡ, ಮಡಿಕೇರಿಯಲ್ಲಿ ಮಕ್ಕಳ ಆಸ್ಪತ್ರೆ ಕಟ್ಟಡ ಸುಮಾರು ೫೬,೫೦೦ ಖರ್ಚಿನ ರಿಪೇರಿ, ಕೆಲಸ, ಮಡಿಕೇರಿ ಆಸ್ಪತ್ರೆಗೆ ಸೇನಿಟರಿ ಪ್ಯಾನಸ್ಥೆ ಮೊದಲಾದುವನ್ನು ಮಾಡಲಾಗುವದು. (ಜೀಪ್ ಕವಿಪಪರ ಭಾಷಣದಲ್ಲಿ ನವೂದಿಸಿರುವ ರಸ್ತೆ ಕೆಲಸಗಳನ್ನು ಕೈಗೊಳ್ಳಲಾಗುವದೆಂದರು.) ಈ ವರ್ಷ ಬೇಕರಿ ಸೇತುವೆ ಕೆಲಸವನ್ನು ಕೈಗೊಳ್ಳಲಾಗುವದೆಂದು ನಾ ಡಿ ದರು. ಯೋಗ್ಯ ಕಂಟ್ರಾಕ್ಟರು ದೊರೆಯುದಿದ್ದರೆ ಇಲಾಖೆಯವರೇ ಈ ಕೆಲಸ ಮಾಡುವರೆಂದೂ ಹೇಳಿದರು.

೧೯೫೨–೫೩ರಲ್ಲಿ ಆದಾಯವು ರೂ. ೪೦,೧೧,೦೦೦ ಬರುವದೆಂದೂ ಖರ್ಚು ರೂ. ೪೯,೮೩,೦೦೦ ಕಳೆದು ರೂಪಾಯಿ ೨೮೦೦೦ ಉಳಿ ವರಿಹೂಗುವದೆಂದೂ ತಾರೀಕು ೧–೪–೫೩ರ ಶಿಲ್ಕು ಸೇರಿಸಿದರೆ ವರ್ಷಾಂತ್ಯದಲ್ಲಿ ಅಂದರೆ ತಾ. ೧–೪–೫೩ರಲ್ಲಿ ರೂ ೭೮,೭೭,೭೦೭ ಉಳಿಯುವದೆಂದೂ ಹೇಳಿದರು. ಈ ವರ್ಷ ವೈನರ್ ಇರಗೇ ಶನಿಗಾಗಿ ರೂ. ೯೩,೦೦೦ ಸ್ವಾಥವಿಕ ವಿದ್ಯಾ ಖರ್ಚಿಗಾಗಿ ರೂ. ೪,೫೯,೦೦೦ ವಯಸ್ಕರ ಶಿಕ್ಷಣ ಯೋಜನೆಗಾಗಿ ರೂ. ೪೭,೦೦೦ ಇಡಲಾಗಿದೆಯೆಂದು ಹೇಳಿದರು. ಜಿಲ್ಲಾ ಬೋರ್ಡ್ ಆಸ್ಪತ್ರೆಗಳಿಗಾಗಿ ರೂ ೧ ಲಕ್ಷ, ಹೆಬ್ಬಾಲೆ ನೀರಾವರಿ ಯೋಜನೆಗಾಗಿ ರೂ. ೫೦,೦೦೦, ಗ್ರಾಮಾಂತರಗಳಲ್ಲಿ ವೆಟೆ ಮಲೇರಿಯಾ ಕೆಲಸಕ್ಕೆ ರೂ ೧೦,೦೦೦ ಇಡಲಾಗಿದೆ ಯೆಂದೂ ಎಕ್ಸ್‌ಟೆನ್ಶನ್ ಸರ್ವಿಸ್ ಯೋಜನೆಗೆ ರೂ ೭೬,೫೦೦, ಫಾರ್ಮರ್ ಯೋಜನೆಗೆ ರೂ ೧೦,೦೦೦ ವ್ಯವಸಾಯ ಶಾಲೆಗೆ ರೂ. ೪೨,೦೦೦, ಪಾಳು ಭೂಮಿಯನ್ನು ವ್ಯವಸಾಯಕ್ಕೆ ತರಲು ರೂ ೧,೫೧,೨೦೦, ವಿದ್ಯುತ್ ಗಾರಿಕೆಗೆ ರೂ. ೪,೦೦೦ ಖರ್ಚು ಮಾಡಲಾಗುವದೆಂದೂ ಹೇಳಿದರು. ಕೈಮಗ್ಗದ ನೈಗಾರಿಕೆಯ ಅಭಿವೃದ್ಧಿಗೆ ರೂ. ೨೦,೦೦೦, ಲೇಬರ್ ವೆಲ್‌ಫೇರಿಗಾಗಿ ರೂ. ೨೫,೦೦೦, ಗ್ರಾಮಾಂತರ ರಸ್ತೆಗಳಿಗಾಗಿ ೧೪೪.೨೦೦(ವೋಟಲು ಇದಕ್ಕೆ ಕೇವಲ ೧೪,೦೦೦ ಇಡಲಾಗಿತ್ತು) ಜಿಲ್ಲಾ ಬೋರ್ಡಿನ ಉದ್ಯೋಗಿಗಳ ವೇತನದ ಬಾಪ್ತು ರೂ. ೩ಲಕ್ಷ, ಟಕಾವಿ ಸಾಲಕ್ಕಾಗಿ ರೂ. ೧ ಲಕ್ಷ ಕೊಡಲಾಗುವದೆಂದು ಸ್ವಷ್ಟ ಪಡಿಸಿದರು.

ಇಂಡಿಯಾ ಸರಕಾರದ ನೇತೃತ್ವದಲ್ಲಿ ಏರ್ಪಟ್ಟಿರುವ ಸಾಮೂ ಹಿಕ ವಿಕಾಸ ಯೋಜನೆಯ ವಿಚಾರ ಪ್ರಸ್ತಾಪಿಸುತ್ತಾ ಈ ಯೋಜನೆಯು ಗ್ರಾಮದ ಜನತೆಯು ಬದುಕಲಿರುವ ಹಕ್ಕನ್ನು ಗಮನಿಸಿ, ಗಂಡಸರ, ಹೆಂಗಸರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿದೆಯೆಂದರು. ಇಂಡಿಯಾ ಸರಕಾರವು ಈಗ ಪ್ರಥಮವಾಗಿ ಉತ್ತರ ಕೊಡಗಿನ ೧೦೦ ಗ್ರಾಮಗಳನ್ನು ಆರಿಸಿಕೊಂಡಿದೆಯೆಂದೂ ಈ ಮೂರು ವರ್ಷಗಳಿಗೆ ಈ ಗ್ರಾಮಗಳಿಗಾಗಿ ರೂ ೨೨ ಲಕ್ಷ (ಇದರಲ್ಲಿ ೬೪ ಲಕ್ಷ ಕೊಡಗು ಸರಕಾರದ್ದು) ವೆಚ್ಚವಾಗುವದೆಂದೂ ಹೇಳಿದರು.

'ಸಿ' ಸಂಸ್ಥಾನಗಳ ಅಕ್ಕಪಕ್ಕ ಜಾರಿಯಲ್ಲಿ ಬಂದ ಕಾರಣ ಮತ್ತು ಬಜೆಟ್ ವಿಧಾನದಲ್ಲಿ ಬದಲಾವಣೆಗಳಾದ ಕಾರಣ ಈ ವರ್ಷ ಬಜೆಟ್ ತಯಾರಿಸುವದು ಸ್ವಲ್ಪ ಕಠಿಣವಾಗಿತ್ತು. ಈ ಸಂದರ್ಭದಲ್ಲಿ ತುಂಬು ಹೃದಯದಿಂದ ಸಕಾಲದಲ್ಲಿ ಅದು ತಯಾರಾಗುವಂತೆ ಅಧಿಕಾರಿಗಳು ಸಹಕರಿಸಿದ್ದಾರೆ. ಈಗ ಆಡಳಿತದಲ್ಲಾದ ಬದಲಾವಣೆಗಳು ಮಾನ್ಯ ಸದಸ್ಯರಿಗೆ ತಿಳಿದಿರಬಹುದು. ಈ ಪರಿವರ್ತನೆಯ ಕಾಲದಲ್ಲಿ ಕೆಲವು ಅಧಿಕಾರಿಗಳು ಶಕ್ತಿಮೀರಿ ಕೆಲಸ ಮಾಡಬೇಕಾಗಿ ಬಂತು ಎಲ್ಲರೂ ದೇಶಕ್ಕಾಗಿ ತನ್ನ ಶಕ್ತಿಗನುಸಾರ ಕರ್ತವ್ಯ ಸಲ್ಲಿಸಿದ್ದಾರೆ. ಅವರು ಉತ್ತಮ ಕೆಲಸವು ಹೊಗಳಲರ್ಹವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಕ್ತಾಯ ಮಾಡುವ ಸಂನ್ನ ಒಂದು ದೇಶವನ್ನು ಅದರ ಪಸ್ತೀರ್ಣದ ಆಳತೆಕೋಲಿನಿಂದ ಅಳೆಯುವ ಕಾಲ ಕಳೆದು ಹೋಯಿತೆಂದು ಹೇಳಬಯಸುತ್ತೇನೆ. ದೇಶವ ವಿಸ್ತೀರ್ಣವು ಪ್ರಾಮುಖ್ಯವಲ್ಲ, ಅದರಲ್ಲಿ ಜೀವಿಸುವ ಜನರು ಮುಖ್ಯ. ನಮ್ಮ ಜನತಾ ಸೇವೆ, ಸಾಮಾಜಿಕ ದೃಷ್ಟಿ, ಭ್ರಾತೃ ಭಾವಗಳ ಅಳತೆಕೋಲಿನಿಂದ ನಾವು ಅಳೆಯಲ್ಪಡುತ್ತೇವೆ. ದೇಶದ ಆಭಿವೃದ್ಧಿಯು ಮುಂದೆ ಜನತೆಯ ಮೇಲೆ ದ್ದು ಅದರ ಅಭಿವೃದ್ಧಿ ಪ್ರಜೆಗಳಿಗೆ ಅವರೇ ಕಾರಣರಾಗಿದ್ದಾರೆ. ಸ್ವಾತಂತ್ರ್ಯವು ನಮಗೆ ತಂದುಕೊಟ್ಟಿರುವ ಈ ಪರಿವರ್ತಿಕ ಪರಿಸ್ಥಿತಿಯನ್ನು ಎಳೆಯುಕೊಂಡು ಜನತೆಯ ಸೇವೆಗಾಗಿ ಭಕ್ತಿಸೇವೆ ಸಲ್ಲಿಸಲು ಮತ್ತು ಅವಶ್ಯಬಿದ್ದಾಗ ಸರ್ವಹಿತದೃಷ್ಟಿಯಿಂದ ತ್ಯಾಗ ಮಾಡಲು ತಯಾರಾಗಿ ನಾವು ಹೆಮ್ಮೆ ಪಡಬಹುದಾದ್ದು ಒಂದು ಆದರ್ಶವನ್ನು ಹಾಕಬೇಕಾಗಿದೆ. ತ್ಯಾಗ, ಸೇವೆ ಮತ್ತು ಕರ್ತವ್ಯದಕ್ಷತೆಗಳಿಗೆ ಹೆಸರಾದ ಕೊಡಗಿನ ಜನರು ಈ ಹೊಸ ಜವಾಬ್ದಾರಿ ಸರಕಾರವನ್ನು ಯಶಸ್ವಿಯಾಗಿ ನಡೆಸುವರೆಂಬ ವಿಶ್ವಾಸ ನನಗೆ ಪೂರ್ಣ ಇದೆ. ನಮ್ಮ ಅಂದರೆ ಸರಕಾರದ ವಿಚಾರ ಹೇಳುವುದಾದರೆ ನಾವು ಕೊಡಗಿನ ಜನತೆಯ ಹಿತದೃಷ್ಟಿಯಿಂದ, ಜಾತಿ, ಮತ ಧರ್ಮ ಬೇಧವನ್ನೆಣಿಸದೆ ಎಲ್ಲರ ಅಭ್ಯುದಯಕ್ಕಾಗಿ ದುಡಿಯಲು ಪ್ರತಿಜ್ಞಾಬದ್ಧರಾಗಿದ್ದೇವೆ. ಜನತೆಯು ಕೊಡುವ ಸಹಕಾರ ಮತ್ತು ಈ ಸಭೆಯು ಪ್ರತಿ ಸದಸ್ಯನು ಸರಕಾರಕ್ಕೆ ಕೊಡುವ ಬೆಂಬಲದ ಮೇಲೆ ಮುಂದಿನ ಭವ್ಯಭವಿಷ್ಯವು ಆಧರಿಸಿದೆ.

ಈ ಬಜೆಟ್ಟಿನಲ್ಲಿ ದೇಶದ ಅಭ್ಯುದಯಕ್ಕೆ ಕಾರಣವಾಗಬಲ್ಲ ಅನೇಕ ಕಾರ್ಯಕಲಾಪಗಳ ರೂಪರೇಖೆ ಇದೆ. ಈ ಸಭೆಯ ಪ್ರತಿಯೊಬ್ಬ ಸದಸ್ಯನೂ ಕೂಡ ಈ ಉತ್ತಮ ಮತ್ತು ಫನತರ ಜವಾಬ್ದಾರಿಯು ಕಾರ್ಯಕಾರಿಯೊಗವಾಗುವಂತೆ ಸಹಕರಿಸುವರೆಂದು ಅನನ್ಯವಾಗಿ ಆಶಿಸುತ್ತೇನೆ.

For Sale.

One Austin Car 1949 Model entirely owner driven—Has run 19,000 miles—Price Rs. 6500/– or nearest offer.

Apply to;—

M. M. GANAPATHY.
Boikere Estate,
Suntikoppa P. O.

2–2

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ನೆಲೆಸ್ಥಾಪಿತ. (1921ರಲ್ಲಿ ಸ್ಥಾಪಿತವಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಈ ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಚೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಬೇರೆ ಬ್ಯಾಂಕು ಚೆನ್ನಾಗಿ ನಡೆಯುತ್ತಿರುವ ಸಹಕಾರಿ ಸಂಘಗಳಿಗೆ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೊತೆಗೆ ಯೂನಿಯನ್ನುಗಳ ಡಿಪಾಸಿಟ್ಟು ಮೂಡಲ್ಪಡುವುದು. ಟ್ರಸ್ಟಿಗಳು, ವಾರ್ಡರ್ಸ್ ಮತ್ತು ವಿಶ್ವವಿದ್ಯಾಲಯ ಇನ್ವೆಸ್ಟ್‌ಮೆಂಟ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎನ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'KOdagu' Press, Mercara, for 'Kodagu' Ltd.